ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 6 ಫೆಬ್ರವರಿ 8, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಆಡಂಬರದ ವ್ಯರ್ಥ ವೆಚ್ಚದ ಸಮಾವೇಶ

ಬೆಂಗಳೂರಿನಲ್ಲಿ ಜಿಲ್ಲಾ ಪರಿಷತ್ ಮಂಡಲ ಪಂಚಾಯತ್ ಸದಸ್ಯರು

ತನ್ನ ಜೀವಮಾನದಲ್ಲೇ ಅತ್ಯಪೂರ್ವ ಸಾಧನೆಮಾಡಿ ತೋರಿಸಿದ್ದೇನೆ. ಕೊನೆಗೂ ತನ್ನ ಕನಸು ನನಸಾಯಿತು ಜಿಲ್ಲಾ ಪರಿಷತ್ ಮಂಡಲ ಪಂಚಾಯತ್ ಚುನಾವಣೆಗಳನ್ನು ಮಾಡಿಯೇ ಬಿಟ್ಟೆ. ಜನತಾ ಪಕ್ಷಕ್ಕೆ ಅತಿ ದೊಡ್ಡ ಯಶಸ್ಸು; ಶಿಖರದ ಕೀರ್ತಿ ಎಂದು ಅತ್ಯಾನಂದ ಉಲ್ಲಾಸದಿಂದ ನಗು ನಗುತ್ತಾ "ಯಾವಾಗ ಬಂದಿರಿ ಉಪಾಧ್ಯಾಯರೇ" ಎಂದು ಆತ್ಮೀಯತೆಯಿಂದ ಹಸ್ತಲಾಘವ ಮಾಡಿದ ಗ್ರಾಮಾಭಿವೃದ್ಧಿ ಪಂಚಾಯತ್‌ರಾಜ್ಯ ಸಚಿವ ಅಬ್ದುಲ್ ನಜೀರ್‌ಸಾಬ್ ಅವರ ಕಣ್ಣುಗಳಲ್ಲಿ ತಾನು ಜಗತ್ತನ್ನೇ ಗೆದ್ದೆನೋ ಎಂಬ ಹೊಳಪು ಪ್ರಕಾಶಿಸುತ್ತಿತ್ತು. ಮುಖ್ಯ ಮಂತ್ರಿಯವರನ್ನೊಳಗೊಂಡು ಜನತಾ ಸರ್ಕಾರದ ಬಹುತೇಕ ಮಂತ್ರಿಗಳೆಲ್ಲ ಹಸನ್ಮುಖರಾಗಿಯೇ ಓಡಾಡುತ್ತಿದ್ದರು. ಗೃಹ ಮಂತ್ರಿ ರಾಚಯ್ಯನವರು ಗಂಭೀರ ವದನರಾಗಿದ್ದರು. ಲೋಕೋಪಯೋಗಿ ಮಂತ್ರಿ, ಮಂತ್ರಿಗಳ ಸಾಲನ್ನು ಬಿಟ್ಟು, ಹಾಸನದಿಂದ ಆರಿಸಿ ಬಂದ ಸದಸ್ಯರ ಮಧ್ಯೆ ಕುಳಿತು ತಾನು ನಿಜವಾಗಿಯೂ ಜನತಾ ಮನುಷ್ಯ ಎಂಬುದನ್ನು ತೋರಿಸಿ ಕೊಡಲು ಪ್ರಯತ್ನ ಮಾಡಿದರು.

ಜನವರಿ 31ರಂದು ಬೆಂಗಳೂರಿನ ಅರಮನೆ ಅಂಗಳದಲ್ಲಿ ನಡೆದ ಜಿಲ್ಲಾ ಪರಿಷತ್ ಮಂಡಲ ಪಂಚಾಯತ್‌ಗಳಿಗೆ ಆರಿಸಿ ಬಂದಂತಾ ಎಲ್ಲಾ ಪಕ್ಷಗಳ, ಸ್ವತಂತ್ರ ಪ್ರತಿನಿಧಿಗಳ ಮಹಾ ಸಮ್ಮೇಳನದಲ್ಲಿ ಕಂಡ ದೃಶ್ಯ ಅದು.

ಸರಕಾರ 75 ಲಕ್ಷಕ್ಕೂ ಹೆಚ್ಚು ಹಣ ವ್ಯಯಮಾಡಿ ಈ ರೀತಿ ಅರ್ಧ ಲಕ್ಷಕ್ಕೂ ಹೆಚ್ಚು ಪ್ರತಿನಿಧಿಗಳನ್ನು ಸೇರಿಸಿ ಭಾಷಣಮಾಡುವ, ಪೌರುಷ ಕೊಚ್ಚಿಕೊಳ್ಳುವ ಅವಕಾಶ ಸಿಗಲಿಲ್ಲವಲ್ಲಾ ಎಂಬ ಚಿಂತೆಯಿಂದ ವೀರಪ್ಪ ಮೊಯಿಲಿ, ಬಂಗಾರಪ್ಪ ಮೊದಲಾದ ಕಾಂಗ್ರೆಸ್ ಮುಖಂಡರು ಸಪ್ಪೆಮುಖ ಮಾಡಿಯೇ ಮೂರು ಗಂಟೆಗಳ ಕಾಲ ಉರಿ ಬಿಸಿಲಲ್ಲೇ ಕೂತು ಭಾಷಣ ಕೇಳುವ ಸೌಹಾರ್ದತೆ ತೋರಿಸಿದರು.

ಭಾಷಣ ಕೇಳುವ ಆತುರದಿಂದ ಮುಂಜಾನೆ 10 ಗಂಟೆಯಿಂದಲೂ ಕೂತಲ್ಲೇ ಕೂತ ಜನ ಒಂದೆಡೆಯಾದರೆ "ಏನಪ್ಪಾ ಭಾಷಣ ಕೇಳಲಿಕ್ಕೆ ಇಷ್ಟು ದೂರ ಬರಬೇಕೇ ? ಉರಿ ಬಿಸಿಲಲ್ಲಿ ಕೂಡ್ರಬೇಕೇ ?" ಎಂದು ಗೊಣಗುತ್ತ ಸಾಲಾಗಿ ಸಭಾಂಗಣದಿಂದ ನಿರ್ಗಮಿಸುವ ಹಾಗೆಯೇ ಸಭಾಂಗಣಕ್ಕೆ ಬರುವ ದೃಶ್ಯ.

"ಬೆಂಗಳೂರಿನ ತಂಪು ಬಿಸಿಲು ನಮ್ಮ ಕಡೆಯ ಉರಿ ಬಿಸಿಲಿಗಿಂತ ಪಾಡಪ್ಪ" ಎಂದು ಗುಲ್ಬರ್ಗಾ ರಾಯಚೂರು ಕಡೆಯ ಜನ ಮಧ್ಯಾಹ್ನ ಒಂದು ಗಂಟೆಯ ಅರಮನೆ ಅಂಗಳದ ಬಿಸಿಲನ್ನು ವರ್ಣಿಸುತ್ತಿದ್ದರು.

ಎಷ್ಟೇ ಕುಂದು ಕೊರತೆ ದೋಷಗಳಿದ್ದರೂ ಕೂಡ ಜಿಲ್ಲಾ ಪರಿಷತ್, ಮಂಡಲ್ ಪಂಚಾಯತ್ ಚುನಾವಣೆಗಳನ್ನು ನಾವು ಸ್ವಾಗತಿಸುತ್ತೇವೆ. ಇಂಥ ಬದಲಾದ ಆಡಳಿತ ವ್ಯವಸ್ಥೆ ಅತ್ಯಗತ್ಯ. ಸಿ. ಪಿ. ಐ. (ಎಂ) ಮುಖಂಡತ್ವದ ಎಡರಂಗ ಸರಕಾರ ಒಂಭತ್ತು ವರ್ಷಗಳ ಹಿಂದೆಯೇ ಇಂಥ ವ್ಯವಸ್ಥೆಯನ್ನು ಪಶ್ಚಿಮ ಬಂಗಾಲ, ತ್ರಿಪುರಾಗಳಲ್ಲಿ ಆಚರಣೆಯಲ್ಲಿ ತಂದಿತ್ತು. ಕರ್ನಾಟಕ ರಾಜ್ಯದಲ್ಲಿ ಮಾತ್ರ ಇದು ಮೊದಲನೇ ಸಲ ನಡೆದಿದೆ. ಪಶ್ಚಿಮ ಬಂಗಾಲ – ತ್ರಿಪುರಾಗಳ ಎಡರಂಗ ಸರ್ಕಾರ, ಕರ್ನಾಟಕದ ಹೆಗಡೆ ಸರಕಾರ ಮಾಡಿದಂತೆ ಚುನಾಯಿತ ಸದಸ್ಯರನ್ನು ಸರಕಾರಿ ಖರ್ಚಿನಿಂದ ಕಲ್ಕತ್ತಾ - ಅಗರ್ತಲಾಗಳಿಗೆ ಕರೆಸಿಕೊಂಡು "ಬಿಸಿಲಿನ ಬೇಗೆಯನ್ನು ನಿಮ್ಮ ಜೊತೆ ಹಂಚಿಕೊಳ್ಳಬೇಕೆಂದೇ ಇಲ್ಲಿ ಯಾರಿಗೂ ಪ್ರತ್ಯೇಕ ವ್ಯವಸ್ಥೆ ಮಾಡಿಲ್ಲ. ರಾಜ್ಯದ ಮುಖ್ಯಮಂತ್ರಿ ಮತ್ತು ಜಿಲ್ಲಾ ಪರಿಷತ್ತಿನ ಅಧ್ಯಕ್ಷ ಒಂದೇ ಕೆಲಸ ಮಾಡುವವರು. ಮಂತ್ರಿ, ಶಾಸಕರು ಮತ್ತು ನೀವು ಎಲ್ಲರೂ ಒಂದೇ ಕೆಲಸ ಮಾಡುವ ಸಮಾನರು ಎಂಬುದಕ್ಕಾಗಿ ತಾರತಮ್ಯವನ್ನು ಕತ್ತರಿಸಿ ಹಾಕಲಾಗಿದೆ" ಎಂದು ತಾವುಗಳೂ, ಪ್ರತಿನಿಧಿಗಳೂ ನಾಲ್ಕು ಗಂಟೆ ಬಿಸಿಲಿನಲ್ಲಿ ಕುಳಿತುದರ ಅರ್ಥವನ್ನು ಜ್ಯೋತಿಬಸುರವರಾಗಲೀ ನೃಪೇನ್ ಚಕ್ರವರ್ತಿಯವರಾಗಲೀ, ರಾಮಕೃಷ್ಣ ಹೆಗಡೆಯವರಂತೆ ವಿವರಿಸುವ ಅವಕಾಶ ತಂದುಕೊಂಡಿರಲ್ಲ, ಅಂಥ ವಿಕ್ರಮವನ್ನೂ ಸಾಧಿಸಲಿಲ್ಲ. ಯಾಕೆಂದರೆ ಬಿಸಿಲಿನ ಬೇಗೆ ಹಂಚಿಕೊಳ್ಳುವುದರಿಂದ ಅಧಿಕಾರದ ವಿಕೇಂದ್ರೀಕರಣವಾಗುವುದಿಲ್ಲ. ಅಧಿಕಾರ ಚಲಾವಣೆಯ ಸಮಾನತೆಯೂ ಬರುವುದಿಲ್ಲ. ಮುಖ್ಯಮಂತ್ರಿ ತನ್ನ ಜವಾಬ್ದಾರಿಯನ್ನು ನೀಗಿಸಬೇಕಲ್ಲದೆ, ಅದನ್ನು ಮಂಡಲ ಪಂಚಾಯತ್ ಸದಸ್ಯನ ಜವಾಬ್ದಾರಿಗೆ ಹೋಲಿಸುವುದು ಸರಿಯಲ್ಲ. ಅವರಿಬ್ಬರ ಜವಾಬ್ದಾರಿಯನ್ನು ಸಮಾನವಾಗಿ ಅರ್ಥೈಸುವುದೂ ಅಲ್ಲ.

ಪಶ್ಚಿಮ ಬಂಗಾಲ, ತ್ರಿಪುರಾಗಳಲ್ಲಿ ಅಲ್ಲಿಯ ಸಿ. ಪಿ. ಐ. [ಎಂ]. ಪಕ್ಷ

(8ನೇ ಪುಟ ನೋಡಿ)

ಅಧ್ಯಕ್ಷೀಯ ಪದ್ಧತಿ ಬಗ್ಗೆ ಎಚ್ಚರ

ಈಗಿನ ಪಾರ್ಲಿಮೆಂಟರಿ ಪದ್ಧತಿಯ ಬದಲಾಗಿ ಸೂಚಿಸಲಾಗುತ್ತಿರುವ ಅಧ್ಯಕ್ಷೀಯ ಮಾದರಿ ಪದ್ಧತಿ ಎಂಬುದು ಏಕಪಕ್ಷ ಆಡಳಿತದ, ಏಕಪಕ್ಷ ಸರ್ವಾಧಿಕಾರದ, ಕೊನೆಗೆ ಆ ಪಕ್ಷದ ನಾಯಕನ ವೈಯಕ್ತಿಕ ಸಾಧನವಲ್ಲದೆ ಬೇರೇನಲ್ಲ. ಅದು ಶಾಸನ ಸಭೆಯನ್ನು, ಮೂಲಭೂತ ಹಕ್ಕುಗಳನ್ನು ಜನತೆಯ ಸ್ವಾತಂತ್ರ್ಯಗಳನ್ನು (ವಾಕ್ ಸ್ವಾತಂತ್ರ್ಯ, ಚಲನಾ ಸ್ವಾತಂತ್ರ್ಯ ಇತ್ಯಾದಿ) ವಿರೋಧ ಪಕ್ಷಗಳ ಸ್ವಾತಂತ್ರ್ಯವನ್ನು ಕಾರ್ಯಾಂಗದ (ಅಂದರೆ ಮಂತ್ರಿಮಂಡಲ, ಕಾರ್ಯದರ್ಶಿಗಳ ಸಮೂಹದ ಮನಸ್ಸೋ ಇಚ್ಛೆಗೆ ಒಳಪಡಿಸುತ್ತದೆ.

ವಿಜಯವಾಡ ಅಧಿವೇಶನದ ನಿರ್ಣಯ

4–5ನೇ ಪುಟದ ಲೇಖನಗಳನ್ನು ನೋಡಿ

ಕಂಟ್ರ್ಯಾಕ್ಟ್ ಉದ್ಯೋಗ ನಿಲ್ಲಲಿ

ರಾಜ್ಯದ ಮಾಧ್ಯಮಿಕ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಕರಾರು ನೆಲೆಯ ಶಿಕ್ಷಕರನ್ನು ಕಾಯಂ ಗೊಳಿಸುವ ಬಗ್ಗೆ ಸರಕಾರ ಪರಿಶೀಲನೆ ನಡೆಸುತ್ತಿದೆಂದು ಶಿಕ್ಷಣ ಸಚಿವ ಡಿ. ಮಂಜುನಾಥ ಅವರು ರಾಜ್ಯ ವಿಧಾನ ಸಭೆಗೆ ತಿಳಿಸಿದ್ದಾರೆ. ಇದರಲ್ಲಿ ಪರಿಶೀಲನೆ ಮಾಡುವ ವಿಚಾರವೇನಿದೆ. ಶಿಕ್ಷಕರ ಸತತ ಹೋರಾಟ ಆಮರಣ ಉಪವಾಸದ ಪ್ರತಿಫಲವಾಗಿ ಶಿಕ್ಷಣ ಮಂತ್ರಿಗಳು ದುಡಿಯುವ ಸುಶಿಕ್ಷಿತ ವರ್ಗಕ್ಕೇನೇ ಅಪಮಾನ ಗೊಳಿಸುವಂಥ ಉತ್ತರ ನೀಡಿರುವುದು ಸಮರ್ಥನೀಯವಲ್ಲ. ಕರಾರು ನೆಲೆಯಲ್ಲಿ ವರ್ಷಗಟ್ಟಲೇ ಇಟ್ಟು ಕೊಳ್ಳುವುದು, ಕ್ರಮ ಬದ್ಧ ಕೆಲಸಗಳನ್ನು ಮಾಡಿಸುವುದು –ಇವುಗಳೆಲ್ಲ ಲಾಭದ ಮೇಲೆಯೆ ಆಸೆಯಿಟ್ಟು ಖಾಸಗೀಕ್ಷೇತ್ರದ ಶಿಕ್ಷಣ ಸಂಸ್ಥೆಗಳು ನಡೆಸುತ್ತಾ ಬಂದ ಪದ್ಧತಿಯಾಗಿದೆ. ಸರ್ಕಾರ ಅಂಥ ಪದ್ಧತಿಯನ್ನು ಕಿತ್ತು ಹಾಕಿ ಶಿಕ್ಷಕರಿಗೆ ನ್ಯಾಯ ಕೊಡಿಸದೆ, ಖಾಸಗೀ ಲಾಭ ಕೋರರಂತೆ ತಾವೂ ಕೂಡ ಲಾಭದಾಸೆಗೆ ಬಲಿಬಿದ್ದು ಶಿಕ್ಷಕರಿಗೆ ಅನ್ಯಾಯವೆಸಗುವುದು ಎಂದಿಗೂ ಸಲ್ಲ. ಇಂಥ ಶೋಷಣೆ ಕೊನೆಗೊಳ್ಳಲೇ ಬೇಕು.

ಸರಕಾರ ಮಾದರಿ ಮಾಲಕನಾಗಬೇಕಾದ್ದು ಅತ್ಯಗತ್ಯ. ಆದರೆ ಬಂಡವಾಳಶಾಹಿ ಸರಕಾರ ತಾನು ಮಾದರಿಯಾಗದೆ ಖಾಸಗೀ ಮಾಲಿಕರಂತೆ ವರ್ತಿಸುತ್ತಿದೆ. ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ 4500 ಕರಾರು ನೆಲೆಯ ಶಿಕ್ಷಕರಿದ್ದಾರೆ. ಅಷ್ಟೆ ಮಂದಿ ಮಾಧ್ಯಮಿಕ ಶಾಲೆಗಳಲ್ಲೂ ಇದ್ದಾರೆ. ಕಿರಿಯ ಕಾಲೇಜುಗಳಲ್ಲಿ 850, ಪ್ರಥಮ ದರ್ಜೆ ಕಾಲೇಜುಗಳಲ್ಲಿ 500 ಇದ್ದಾರೆ. ಹೀಗೆ ಶಿಕ್ಷಣ ಇಲಾಖೆಯಲ್ಲಿ ಒಟ್ಟು 10,500 ಕರಾರು ನೆಲೆಯ ಶಿಕ್ಷಕರು ಹಲವಾರು ವರ್ಷಗಳಿಂದ ಕಡಿಮೆ ವೇತನ ಯಾವುದೇ ಸೇವಾಸೌಲಭ್ಯಗಳಿಲ್ಲದೆ ದುಡಿಯುತ್ತಿದ್ದಾರೆ. ಇದರಂತೆಯೇ, ಸರಕಾರದ ಲೋಕೋಪಯೋಗಿ, ವಿದ್ಯುನ್ಮಂಡಳಿ, ಕಂದಾಯ, ನೀರಾವರಿ, ಸಮಾಜ ಕಲ್ಯಾಣ, ನೀರು ಸರಬರಾಜು, ಒಳಚರಂಡಿ ಮಂಡಳಿ, ಅರಣ್ಯ, ಪೌರಾಡಳಿತೆ,–ಹೀಗೆ ಪ್ರತಿಯೊಂದು ಇಲಾಖೆಯಲ್ಲೂ ಸಾವಿರಾರು ಜನ ಕರಾರು ನೆಲೆ, ದಿನಗೂಲಿಯಾಗಿ ವರ್ಷಗಟ್ಟಲೆ ದುಡಿಯುತ್ತಿದ್ದಾರೆ.

ಇದು ಸರ್ಕಾರದಿಂದ ನಡೆಯುವ ಶೋಷಣೆಯಲ್ಲವೇ ?

ಎಲ್ಲಾ ಇಲಾಖೆಗಳಲ್ಲೂ ತಮ್ಮ ಸೇವೆಯ ಅಗತ್ಯತೆ ಇದೆ. ಆ ಕಾರಣದಿಂದಲೇ ತಮ್ಮನ್ನು ನೇಮಿಸಿಕೊಂಡದ್ದಾಗಿದೆ. ಹಾಗಿರುವಾಗ ತಮ್ಮನ್ನು ಖಾಯಂಗೊಳಿಸಿ,ಆಯಾ ಹುದ್ದೆಗೆಅನುಗುಣವಾಗಿ ತಮಗೂ ಸಂಬಳ ಸೇವಾ ನಿಯಮಬೇಕೆಂದು ಕೇಳುವುದರಲ್ಲಿ ತಪ್ಪೇನಿದೆ. ? ಇದರಲ್ಲಿ ಪರಿಶೀಲನೆಯ ಅಂಶವೇನಿದೆ ? ಖಾಯಂಗೊಳಿಸಬೇಕೆಂದು ಇವರು ಬೀದಿಗಿಳಿದು ಹೋರಾಡುತ್ತಿದ್ದಾರೆ. ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಇವರ ಬೇಡಿಕೆ ನ್ಯಾಯಯುತವಾಗಿದೆಂದು ಎಲ್ಲರಿಗೂ ಗೊತ್ತು. ಆದರೆ ಜನತಾ ಸರಕಾರ ಖಾಸಗೀ ಮಾಲಕರಂತೆ ಈ ಜನರನ್ನು ಸುಲಿಯುತ್ತಿರುವುದು, ಅವರ ಜೀವನವನ್ನು ಸಂದಿಗ್ಧ ಪರಿಸ್ಥಿತಿಗೆ ಒಯ್ಯುತ್ತಿರುವುದು, ಅಭದ್ರತೆಯಲ್ಲಿಡುತ್ತಿರುವುದು, ಸಹಿಸಲಾರದ ಅನ್ಯಾಯ. ಈ ಅನ್ಯಾಯವನ್ನು ಕೂಡಲೇ ನಿಲ್ಲಿಸಿ, ಕರಾರಿನ ಮೇಲೆ, ದಿನಗೂಲಿಯಲ್ಲಿರುವ ಎಲ್ಲಾ ಶಿಕ್ಷಕರನ್ನೂ, ನೌಕರದಾರರನ್ನು ಕೂಡಲೇ ಖಾಯಂಗೊಳಿಸುವುದು ಜನತಾ ಸರಕಾರದ ಕರ್ತವ್ಯ ಇದರಲ್ಲಿ "ಪರಿಶೀಲನೆ" ಮಾಡುತ್ತಿವೆಂಬ ಮೊಂಡವಾದ ಖಂಡನೀಯ.

ಎನ್. ಕೆ. ಉಪಾಧ್ಯಾಯ

ವಿಧಾನ ಮಂಡಲದಲ್ಲಿ

ವಿಧಾನ ಸಭೆಯಲ್ಲಿ ನಮ್ಮ ಶಾಸಕರು ಎತ್ತಿದ ಪ್ರಶ್ನೆಗಳೇನು?

ವಿಧಾನ ಮಂಡಲದಲ್ಲಿ ಅಧಿವೇಶನ ಜನವರಿ 29 ರಿಂದ ರಾಜ್ಯಪಾಲರ ಭಾಷಣದೊಂದಿಗೆ ಆರಂಭವಾಯಿತು. ಅಂದಿನಿಂದ ಇಲ್ಲಿಯವರೆಗೂ ಕೆಲವು ಮುಖ್ಯ ಸಮಸ್ಯೆಗಳನ್ನು ಈ ಸದನದಲ್ಲಿ ಎತ್ತಲಾಗಿದೆ. ಅನೇಕ ಕಾನೂನುಗಳ ಅಂಗೀಕಾರದಲ್ಲಿ ಮಧ್ಯ ಪ್ರವೇಶಿಸಿ ಪಕ್ಷದ ಅಭಿಪ್ರಾಯವನ್ನು ಮಂಡಿಸಿದ್ದಾರೆ ನಮ್ಮ ಶಾಸಕರು.

ಸರೋಜಿನಿ ಮಹಿಷಿ ಸಮಿತಿ ವರದಿ

ಮಣ್ಣಿನ ಮಕ್ಕಳಿಗೇ ಕೆಲಸ ಎನ್ನುವ ದುಡಿಯುವ ಜನ ವಿರೋಧಿ ವಾದವನ್ನು ಪ್ರತಿಪಾದಿಸುವ ಸರೋಜಿನಿ ಮಹಿಷಿ ಸಮಿತಿಯ ವರದಿಯ ಬಗ್ಗೆ ಚರ್ಚೆಯಾಗಬೇಕೆಂದು ಕಾ|| ವೆಂಕಟರಾಮಯ್ಯ, ಟಿ. ಎಸ್. ಮಣಿಯವರು ಕಳುಹಿಸಿದ ಸೂಚನೆಯನ್ನು ಒಪ್ಪದ ವಿಧಾನ ಸಭಾ ಸ್ಪೀಕರ್‌ರವರು ಅದನ್ನು ಕೊನೆಗೆ ಗಮನ ಸೆಳೆಯುವ ಸೂಚನೆಯಾಗಿ ಪರಿವರ್ತಿಸಿದ್ದರು. ಮುಖ್ಯಮಂತ್ರಿಗಳ ಗಮನವನ್ನು ಸೆಳೆದ ಈ ಸೂಚನೆಗೆ ಉತ್ತರ ನೀಡಲು ಮುಖ್ಯಮಂತ್ರಿಗಳು ಹಾಜರಿರಲಿಲ್ಲ. ಅವರ ಪರವಾಗಿ ಕಾನೂನು ಸಚಿವ ಲಕ್ಷ್ಮೀಸಾಗರ್‌ರವರು ಉತ್ತರ ನೀಡಿದರು. ಸಿ. ಪಿ. ಐ. (ಎಂ) ಶಾಸನ ಸಭಾ ಗುಂಪಿನ ನಾಯಕ ಕಾ|| ವೆಂಕಟರಾಮಯ್ಯನವರು ಭಾರತೀಯ ಸಂವಿಧಾನದಲ್ಲಿ ಎಲ್ಲರಿಗೂ ದತ್ತವಾಗಿರುವ ಪೌರ ಹಕ್ಕುಗಳನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ. ರಾಜ್ಯಕ್ಕೆ ಬೇರೆ ರಾಜ್ಯಗಳಿಂದ ಜನರು ಬರುವುದನ್ನು ತಡೆಯುವ ಯಾವುದೇ ಪ್ರಯತ್ನ ಸಂವಿಧಾನ ವಿರೋಧವಾಗುತ್ತದೆ ಮಾತ್ರವಲ್ಲ, ಬೇರೆ ರಾಜ್ಯಗಳಲ್ಲಿ ವಿಪುಲ ಸಂಖ್ಯೆಯಲ್ಲಿ ವಾಸವಾಗಿರುವ ಕನ್ನಡಿಗರಿಗೆ ಹಾನಿಯಾಗುತ್ತದೆಂದು ಜನತಾ ಸರ್ಕಾರವನ್ನು ಎಚ್ಚರಿಸಿದರು.

ಈಗಾಗಲೇ ಕೆಲವೆಡೆ ವಿಚ್ಛಿದ್ರಕಾರಿ ಶಕ್ತಿಗಳು ತಲೆಎತ್ತಿರುವಾಗ ಇಲ್ಲಿ ಒಂದು ಭಾಷೆ ಬಗ್ಗೆ ಅಭಿಮಾನ ಕೆರಳಿಸಿ ವಿಚ್ಛಿದ್ರಕಾರಿ ಶಕ್ತಿಗಳಿಗೆ ಪ್ರೋತ್ಸಾಹ ಕೊಟ್ಟಂತೆ ಆಗುವುದಿಲ್ಲವೆ ? ಎಂದು ಕಾ|| ವೆಂಕಟರಾಮಯ್ಯ ಕಳವಳ ವ್ಯಕ್ತಪಡಿಸಿದರು. ಜನತಾ ಸರ್ಕಾರ ಮಾತ್ರ ಈಗಾಗಲೇ ಮಹಿಷಿ ಸಮಿತಿ ನೀಡಿದ ಮಧ್ಯಂತರ ವರದಿಯ ಎಲ್ಲಾ ಶಿಫಾರಸುಗಳನ್ನು ಅಂಗೀಕರಿಸಿ ಸುತ್ತೋಲೆಗಳನ್ನು ನೀಡಲಾಗಿದೆ. ಈ ವರದಿ ನೀಡಿರುವ 58 ಅಂಶಗಳ ಶಿಫಾರಸುಗಳನ್ನು ಪರೀಕ್ಷಿಸಿ ಅಂತಿಮ ನಿರ್ಣಯವನ್ನು ಕೈಗೊಳ್ಳಲಾಗುವುದು ಎಂದು ಭಾಷಾಂಧ ಶಕ್ತಿಗಳಿಗೆ ಪ್ರೋತ್ಸಾಹ ನೀಡುವ ತಮ್ಮ ನೀತಿಗೆ ಅಂಟಿಕೊಂಡಿತು. ಸಿ.ಪಿ.ಐ.ನ ಎಂ.ಎಸ್. ಕೃಷ್ಣನ್‌ರವರೂ ವೆಂಕಟರಾಮಯ್ಯನವರ ಹೆಸರಿನಲ್ಲಿದ್ದ ಈಗ ಮನಸೆಳೆವ ಸೂಚನೆಯ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿ ಮಹಿಷಿ ಸಮಿತಿಯ ಶಿಫಾರಸುಗಳನ್ನು ವಿರೋಧಿಸಿದರು.

ಸಚಿವ ಲಕ್ಷ್ಮೀಸಾಗರ್‌ರವರಿಗೆ, ಹಾಗೂ ಜನತಾ ಸರ್ಕಾರಕ್ಕೆ "ಈ ವರದಿಯ ಶಿಫಾರಸುಗಳಲ್ಲಿ ಸಂವಿಧಾನ ಬಾಹಿರವಾದದ್ದೇನೂ ಕಂಡಿಲ್ಲ, ಹೊರ ರಾಜ್ಯಗಳೊಂದಿಗೆ ಕರ್ನಾಟಕದ ಸಂಬಂಧವೂ ಕೆಡುವುದಿಲ್ಲ. ವಿಚ್ಛಿದ್ರಕಾರಿ ಶಕ್ತಿಗಳಿಗೆ ಪ್ರೋತ್ಸಾಹನೀಡುವುದೂ ಇಲ್ಲ." ಇವರ ಈ ಕಾಮಾಲೆಗಣ್ಣಿಗೆ ವರದಿಯ ಶಿಫಾರಸುಗಳ ಅಪಾಯ ತಟ್ಟದಿದ್ದರೆ ಏನು ಹೇಳಲು ಸಾಧ್ಯ.

ದರೋಡೆ ಕೋರರ ಹಾವಳಿ

ರಾಜ್ಯಾದ್ಯಂತ ಕೃಷಿ ಪರಿಸ್ಥಿತಿ ಬಿಗಡಾಯಿಸಿರುವುದಕ್ಕೆ ಎಲ್ಲೆಲ್ಲೂ ಹೆಚ್ಚುತ್ತಿರುವ ದರೋಡೆಕೋರರ ಹಾವಳಿಗಳೇ ಸಾಕ್ಷಿ. ಬೆಂಗಳೂರಿನಲ್ಲಿ ಮಾತ್ರವಲ್ಲ, ಕೆ.ಜಿ.ಎಫ್.ನಲ್ಲಿ, ಬಳ್ಳಾರಿಯಲ್ಲಿ, ತುಮಕೂರಿನಲ್ಲಿ ಪ್ರತಿ ದಿನವೂ ದರೋಡೆ ಪ್ರಕರಣಗಳು ಹೆದ್ದಾರಿ ದರೋಡೆಗಳು. ಈ ಸಿ.ಪಿ.ಐ.(ಎಂ) ಶಾಸಕ ಟಿ.ಎಸ್. ಮಣಿಯವರು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಗೃಹ ಸಚಿವ ರಾಚಯ್ಯನವರು ಬೆಂಗಳೂರು ನಗರದಲ್ಲಿ ಕೆ.ಜಿ.ಎಫ್.ನ ದರೋಡೆ ಪ್ರಕರಣಗಳ ವಿವರ ನೀಡಿದರು. ಬೆಂಗಳೂರಿನಲ್ಲಿ ವರ್ಷದಿಂದ ವರ್ಷಕ್ಕೆ ದರೋಡೆ ಪ್ರಕರಣಗಳು ಹೆಚ್ಚುತ್ತಿರುವುದು ಕಂಡು ಬಂದಿತು. ಬೆಂಗಳೂರಿನಲ್ಲಿ ಒಟ್ಟು 44 ಪ್ರಕರಣಗಳಲ್ಲಿ ಕೇವಲ 18 ಪ್ರಕರಣಗಳನ್ನು ಮಾತ್ರಾ ಪತ್ತೆಹಚ್ಚಲು ಸಾಧ್ಯವಾಗಿದೆ ಎಂದರು. ಪ್ರತಿನಿತ್ಯ ಗಸ್ತು ತಿರುಗಲು ಸಂಚಾರಿ ದಳವನ್ನು ವ್ಯವಸ್ಥೆ ಮಾಡಲಾಗಿದೆಯೇ ಎಂಬ ಪ್ರಶ್ನೆಗೆ ಸರಕಾರದ ಉತ್ತರ "ಇಲ್ಲ".

ಕೊನೆಗೆ ಟಿ.ಎಸ್. ಮಣಿಯವರ ಒತ್ತಾಯಕ್ಕೆ ಮಣಿದು ದರೋಡೆ ಹಾವಳಿಗೊಳಗಾದ ಪ್ರದೇಶಗಳ ಪೌರರಿಗೆ ರಕ್ಷಣೆ ನೀಡಲು ಆ ಪೋಲೀಸ್ ಠಾಣೆಗಳ ಪೋಲೀಸರ ಸಂಖ್ಯೆಯನ್ನು ಹೆಚ್ಚು ಮಾಡಲು, ವಿಶೇಷ ಸಂಚಾರಿ ದಳವನ್ನು ರಚಿಸಲು ಗೃಹ ಸಚಿವರು ಒಪ್ಪಿಕೊಂಡರು. ಕೆ.ಜಿ.ಎಫ್.ಗೆ ಇಂತಹ ಮೂರು ದಳ, ಬೆಂಗಳೂರಿಗೆ 15-20 ದಳವನ್ನಾದರೂ ಒದಗಿಸಬೇಕೆಂಬುದು ಟಿ ಎಸ್. ಮಣಿಯವರ ಒತ್ತಾಯವಾಗಿತ್ತು. ಅಂದಿನ 'ಸಂಜೆವಾಣಿ' ಪತ್ರಿಕೆಯಲ್ಲಿ ಇದೇ ಪ್ರಮುಖ ಸುದ್ದಿ.

[3 ನೇ ಪುಟವನ್ನೂ ನೋಡಿ]

ಬೆಂಗಳೂರು ಕೆ. ಜಿ. ಎಫ್. ನಲ್ಲಿ

ದರೋಡೆ ಪ್ರಕರಣಗಳು	ವರ್ಷ	1984	1985	1986	ಒಟ್ಟು
	ಬೆಂಗಳೂರು	13	14	17	44
	ಕೆ.ಜಿ.ಎಫ್.	2	2	1	5
ಪತ್ತೆಹಚ್ಚಲಾದ ಪ್ರಕರಣಗಳು					
	ಬೆಂಗಳೂರು	4	10	4	18
	ಕೆ.ಜಿ.ಎಫ್.	1	1	1	3

'ಭೂತಲ ಸ್ವರ್ಗ ?' ಅಮೇರಿಕನ್ ಸಮಾಜದ ಸ್ವರೂಪ

"ಸಂಸ್ಕೃತಿಯನ್ನು ಕುಲಗೆಡಿಸುತ್ತಿರುವವರು ಯಾರು ?" ಕಾ|| ಜಿ. ವಿ. ಶ್ರೀರಾಮರೆಡ್ಡಿಯವರು ಬರೆದ ಲೇಖನ

ತೀವ್ರ ರೀತಿಯ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿರುವ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯು ಎಂತಹ ಕ್ರೂರ ಮತ್ತು ಅಧಃ ಪತನ ಹೊಂದುತ್ತಿರುವ ರೋಗಗ್ರಸ್ತ ಸಮಾಜವನ್ನು ಸೃಷ್ಟಿಸುತ್ತದೆ ಎಂಬುದಕ್ಕೆ ಅಮೇರಿಕಾದ ಸಮಾಜದಲ್ಲಿನ ಕೆಲವು ಬೆಳವಣಿಗೆಗಳನ್ನು ನೋಡಿದರೆ ಎಂತಹವರಿಗೂ ಭಯಾನಕ ವೆನಿಸುತ್ತದಷ್ಟೇ ಅಲ್ಲ ಇಡೀ ಬಂಡವಾಳಶಾಹಿ ವ್ಯವಸ್ಥೆಯು ಎಂತಹ ನೀಚ ಸಂಸ್ಕೃತಿಯನ್ನು ಅರಾಜಕತೆಯನ್ನು ಸೃಷ್ಟಿ ಮಾಡುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ತನ್ನ ಆರ್ಥಿಕ ದಿವಾಳಿ ಕೋರತನದಿಂದಾಗಿ ರಾಷ್ಟ್ರಸಂಪತ್ತನ್ನು ಯಾವ ರೀತಿ ಜೀವ ವಿರೋಧಿಯನ್ನಾಗಿ ಮಾರ್ಪಡಿಸುತ್ತದೆ ಎಂಬುದನ್ನು ಸಹ [illegible] ಪಡಿಸುತ್ತದೆ.

ಜಗತ್ತಿನ ಬಹು ಸಂಖ್ಯಾತ ಜನರಿಗೆ ಬಂಡವಾಳಶಾಹಿ ಸಮಾಜಗಳ ಬಗ್ಗೆ ವಿಪರೀತ ಮೋಜು ಮತ್ತು ಭ್ರಮೆಗಳಿವೆ. ಅದರಲ್ಲೂ ಮುಖ್ಯವಾಗಿ ಅಮೇರಿಕಾ ದೇಶದ ಬಗ್ಗೆ ವಿಪರೀತವಾದಂತ ಭ್ರಮೆ ಮತ್ತು ಕಲ್ಪನೆಗಳಿವೆ. ಆದರೆ ಅಮೇರಿಕದ ಸಮಾಜದ ಬೆಳವಣಿಗೆ ಅದು ಇಂದು ಯಾವ ಹಂತದ ದುರಂತವನ್ನು ತಲುಪಿದೆ ಎಂಬುದನ್ನು ನೋಡಿದರೆ ಎಂತಹ ನಾಗರೀಕ ಮನುಷ್ಯನಿಗೂ ಆತಂಕ,ನಾಚಿಕೆಮತ್ತು ದಿಗಿಲುಂಟಾಗುತ್ತದೆ.

1982ರ ಪ್ರಾರಂಭದಲ್ಲಿ ಒಂದು ದಿನ ಆಕಸ್ಮಾತ್ ಆಗಿ ಆಗ ತಾನೆ 3 ವರ್ಷಗಳ ಅಮೇರಿಕಾ ಜೀವನದಿಂದ ಭಾರತಕ್ಕೆ ಬಂದಿದ್ದ ನಮ್ಮ ಎಸ್.ಎಫ್.ಐ.ನ ಹಿಂದಿನ ಉಪಾಧ್ಯಕ್ಷರಾಗಿದ್ದ ಮತ್ತು ಈಗ "ದಿ ಹಿಂದೂ ಪತ್ರಿಕೆ" ಮೇನೇಜಿಂಗ್ ಡೈರೆಕ್ಟರ್ ಆಗಿರುವ ನನ್ನ ಹಳೆಯ ಸ್ನೇಹಿತ ಎನ್. ರಾಮ್ ದೆಹಲಿಯಲ್ಲಿಸಿಕ್ಕಿದರು. ನಾನು ಮತ್ತು ಅವರು ಅಂದು ಅಮೇರಿಕಾದ ಬಗ್ಗೆ ಚರ್ಚೆ ಮಾಡುತ್ತಿದ್ದಾಗ ಅವರು ಒಂದು ವಿಷಯವನ್ನು ಹೇಳಿದ್ದರು ಇಂದು ಅಮೇರಿಕಾದಲ್ಲಿ ಯಾರೊಬ್ಬನು ಪಿಸ್ತೂಲು ಹಿಡಿದುಕೊಳ್ಳದೆ ಓಡಾಡುವ ಹಾಗಿಲ್ಲ. ಮತ್ತೆ ಮನೆಬಿಟ್ಟು ಹೊರಗೆ ಹೋದರೆ ಅವರು ಮತ್ತೆ ಮನೆಗೆ ವಾಪಸ್ಸು ಬರುತ್ತಾರೆಂಬ ನಂಬಿಕೆಯೂ ಇಲ್ಲ ಎಂದು ಹೇಳಿದ ಅವರು ತಾನು ಇಂಡಿಯಾಕ್ಕೆ ವಾಪಸ್ಸು ಬರುವ ಮುನ್ನಾದಿನ ವಾಷಿಂಗ್ಟನ್ ಅವೆನ್ಯೂದಲ್ಲಿ ತನ್ನನ್ನು ದೋಚಲೆತ್ನಿಸಿದ ರೀತಿಯನ್ನು ವಿವರಿಸಿದರು. ಆ ದಿವಸ ಅವರು ಆ ವಿಷಯಗಳನ್ನು ಹೇಳಿದ್ದಕ್ಕೂ ಇಂದು ಆ ದೇಶದ ಪತ್ರಿಕೆಗಳ ಹೇಳುತ್ತಿರುವ ವಿಷಯಗಳನ್ನು ಗಮನಿಸಿದರೆ ಅವರು ಹೇಳಿದ್ದರ ಹತ್ತರಷ್ಟು ದೃಢಗೊಳ್ಳುತ್ತದೆ.

ಇಂದು ಅನೇಕ ದೇಶಗಳ ಆಂತರಿಕ ವ್ಯವಹಾರಗಳಲ್ಲಿ ಕಬಂಧ ಹಸ್ತವನ್ನು ಚಾಚಿ ಎಲ್ಲ ದೇಶಗಳನ್ನು ಕಪಿ ಮುಷ್ಟಿಯಲ್ಲಿ ಹಿಡಿದಿಡಲು ಮತ್ತು ಅಣು ಅಸ್ತ್ರಗಳ ಭೀತಿಯನ್ನು ಹುಟ್ಟಿಸಿ ಜಗತ್ತನ್ನೇ ತನ್ನ ಹಿಡಿತದಲ್ಲಿ ಹಿಡಿದಿಡಲು ಪ್ರಯತ್ನಿಸುತ್ತಿರುವ ಅಮೇರಿಕಾವು ತನ್ನ ಸಮಾಜದಲ್ಲಿ ನಡೆಯುತ್ತಿರುವ ಸಂಘ ವಿದ್ರೋಹಿ ಶಕ್ತಿಗಳನ್ನು ಮತ್ತು ಸಂಸ್ಕೃತಿಯನ್ನು ಹಿಡಿತದಲ್ಲಿಡುವುದರಲ್ಲಿ ಸಂಪೂರ್ಣ ವಿಫಲವಾಗಿದೆ. ಇಂದು ಅಮೇರಿಕಾ ದೇಶದ ಸಾಮಾಜಿಕ ನೀಚ ಸಂಸ್ಕೃತಿಯು ಸಿಲ್ವೆಸ್ಟರ್‌ಸ್ಟಾಲಿನ್ ಎಂಬ ಸಿನಿಮಾ ನಾಯಕ ಸೃಷ್ಟಿಸಿರುವ "ರಾಂಬೋ" ಪಾತ್ರದ ರೀತಿಯಲ್ಲಿ ಬೆಳೆಯುತ್ತಾ ವೈಯುಕ್ತಿಕ ಹಿಂಸಾವಾದ ಮತ್ತು ಕ್ಷಣಿಕ ಆವೇಶಗಳಿಂದ ಯುವ ಜನತೆಯು ಉದ್ರೇಕಗೊಳ್ಳುತ್ತಿದೆ. ಉದ್ಯೋಗಾವಕಾಶಗಳು ಕಡಿಮೆಯಾಗುತ್ತಿರುವುದರಿಂದ ಯುವ ಜನತೆಯಲ್ಲಿ ಅಸಂತೃಪ್ತಿ ಹೆಚ್ಚುತ್ತಿದೆ. ಈ ಅಸಂತೃಪ್ತಿಯು ಸಮಾಜ ಘಾತುಕಶಕ್ತಿಗಳಿಗೆ ಪ್ರೇರೇಪಣೆ ನೀಡುತ್ತಿದೆ.

ನಿರುದ್ಯೋಗಿಗಳಲ್ಲಿ 25 ವರ್ಷಕ್ಕಿಂತ ಕೆಳಗಿನವರ ಸಂಖ್ಯೆ ಶೇಕಡ 45 ರಷ್ಟಿದೆ. ಕೆಲವು ಜನ ವಿಧಿಯಿಲ್ಲದೆ ಸೇನೆಯಲ್ಲಿ ಸೇರುತ್ತಿದ್ದಾರೆ.

ಅಮೇರಿಕಾ ದೇಶದ ಒಂದು ವರದಿಯ ಪ್ರಕಾರ ಅಲ್ಲಿ ನಡೆಯುತ್ತಿರುವ ಗಂಭೀರವಾದ ಅಪರಾಧಗಳಲ್ಲಿ ಅರ್ಧಕ್ಕಿಂತ ಹೆಚ್ಚು ಅಪರಾಧಗಳನ್ನು 17 ವರ್ಷಕ್ಕಿಂತ ಕೆಳಗಿರುವ ಯುವಕರೇ ಮಾಡುತ್ತಿದ್ದಾರೆ. ಪ್ರತಿ 9 ಮಂದಿ ಯುವಕರಲ್ಲೊಬ್ಬರು 18 ವರ್ಷ ಕಳೆಯುವುದರೊಳಗೆ ಕನಿಷ್ಠ ಒಂದು ಸಾರಿಯಾದರೂ ಯಾವುದೋ ಒಂದು ಅಪರಾಧಕ್ಕಾಗಿ ನ್ಯಾಯಾಲಯಕ್ಕೆ ಹಾಜರಾಗುತ್ತಾರೆ. 70 ರ ದಶಕದಲ್ಲಿ "ಮಾರಿಜೋನಾ, ಕೋಕೇನ್" ಎಂಬ ಮಾದಕ ಪದಾರ್ಥಗಳನ್ನು ಸೇವಿಸುವರ ಸಂಖ್ಯೆಯಲ್ಲಿ 12 ರಿಂದ 17 ವರ್ಷಗಳ ಒಳಗಿನವರ ಸಂಖ್ಯೆ ಹೆಚ್ಚಿದೆ.

ಟಿ. ವಿ. ಸಂಸ್ಕೃತಿ

ಅಮೇರಿಕಾದಲ್ಲಿ ದೂರದರ್ಶನಗಳ ಪ್ರಸಾರದ ಪ್ರಭಾವ ಯುವ ಜನಾಂಗದ ಮೇಲೆ ಯಾವ ರೀತಿಯಲ್ಲಿ ಆಗುತ್ತಿದೆಯೆಂಬುದನ್ನು "ಅಮೇರಿಕಾ ಮೆಡಿಕಲ್ ಅಸೋಸಿಯೇಶನ್" ತಯಾರು ಮಾಡಿರುವ ವರದಿಯನ್ನು ನೋಡಿದರೆ ಭಯಂಕರವೆನಿಸುತ್ತದೆ. ಈ ವರದಿಯ ಪ್ರಕಾರ ಪ್ರತಿದಿನ ಪ್ರತಿಯೊಬ್ಬ ಮನುಷ್ಯನು ಸರಾಸರಿ ಆರೂವರೆ ಗಂಟೆಗಳ ಕಾಲ ದೂರದರ್ಶನ ಪ್ರಸಾರವನ್ನು ನೋಡುತ್ತಾನೆ. ದಿನ ಪತ್ರಿಕೆಗಳಲ್ಲಿ ಬರುವ ಸಮಾಚಾರಗಳಿಗಿಂತ ದೂರದರ್ಶನಗಳಲ್ಲಿ ಬರುವ ಸಮಾಚಾರಗಳಿಗೆ ಅಲ್ಲಿ ಹೆಚ್ಚಿನ ಪ್ರಾಮುಖ್ಯತೆ ಇದೆ. ಅನೇಕ ವಾಣಿಜ್ಯ ಸಂಸ್ಥೆಗಳು ವಿವಿಧ ಆಕರ್ಷಣೀಯ ದೃಶ್ಯಗಳನ್ನು ಪ್ರಸಾರ ಮಾಡುತ್ತವೆ. ಪ್ರಸ್ತುತ 100 ದೊಡ್ಡ ದೊಡ್ಡ ಕಂಪನಿಗಳು ದೂರದರ್ಶನದಲ್ಲಿ ಜಾಹಿರಾತುಗಳನ್ನು ಪ್ರಕಟಿಸುತ್ತವೆ. ಈ ಕಂಪೆನಿಗಳು ಸುಂದರ ಹುಡುಗಿಯರ ಅರೆನಗ್ನ, ಅಶ್ಲೀಲ ದೃಶ್ಯಗಳನ್ನು ಪ್ರಸಾರ ಮಾಡುವುದರಿಂದ ಇವುಗಳನ್ನು ನೋಡಲು ಯುವಕ ಯುವತಿಯರು ಹಾತೊರೆದು ಹೋಗುತ್ತಿದ್ದಾರೆ. ಅನೇಕ ಸಾಧಾರಣ ದೂರದರ್ಶನದ ಕಾರ್ಯಕ್ರಮಗಳಲ್ಲಿ ಹಿಂಸಾಕೃತ್ಯ ದೃಶ್ಯಗಳು ಮಿತಿ ಮೀರಿ ತೋರಿಸಲ್ಪಡುವುದರಿಂದ ಸಣ್ಣ ಮಕ್ಕಳು ಕೂಡ ದೂರದರ್ಶನಗಳಿಗೆ ದಾಸರಾಗುತ್ತಿದ್ದಾರೆ. ಅಮೇರಿಕಾದಲ್ಲಿ ಒಬ್ಬ ಹುಡುಗನಿಗೆ 18 ವರ್ಷಗಳಾಗುವುದರೊಳಗೆ 18 ಸಾವಿರ ಹತ್ಯೆಗಳನ್ನು ಟಿ. ವಿ. ಯಲ್ಲಿ ನೋಡುತ್ತಾನೆಂದು ಈ ವರದಿ ತಿಳಿಸುತ್ತದೆ.

ಮಾದಕ ವಸ್ತುಗಳ ಅಧಿಪತ್ಯ

ಅಮೇರಿಕಾ ಸಮಾಜವನ್ನು ಪೀಡಿಸುತ್ತಿರುವ ಮತ್ತೊಂದು ವ್ಯಾಧಿಯೆಂದರೆ ಮಾದಕ ಪಾನೀಯಗಳು. ಇದರ ಪ್ರಭಾವ ಎಷ್ಟರ ಮಟ್ಟಿಗೆ ಬೀರಿದೆಯೆಂದರೆ ಶಾಲಾ ಮಕ್ಕಳು ಕೂಡ ವಿಪರೀತ ಧೂಮಪಾನ ಮಾಡುತ್ತಾರೆ. ಹೆಚ್ಚು ಅಮಲನ್ನು ತರುವ ಎಲ್. ಎಸ್. ಡಿ., ಡಿ. ಎಂ. ಟಿ., ಹೆರಾಯಿನ್, ಕೋಕಾಯಿನ್ ಮತ್ತು ಮಾರ್ಫಿನ್ ಮುಂತಾದ ಅಮಲು

[6ನೇ ಪುಟ ನೋಡಿ]

ಜಿಲ್ಲಾ, ಪರಿಷತ್ ಮಂಡಲ್ ಪಂಚಾಯತ್ ಫಲಿತಾಂಶಗಳು

ಸಿ ಪಿ.ಐ.(ಎಂ) ಪಕ್ಷದ ಹಾಗೂ ಬೆಂಬಲಿತ ಅಭ್ಯರ್ಥಿಗಳು ರಾಜ್ಯದ 12 ಜಿಲ್ಲೆಗಳಲ್ಲಿ 289 ಮಂಡಲ ಪಂಚಾಯತಿ ಸ್ಥಾನಗಳಲ್ಲಿ ಜಯಗಳಿಸಿದ್ದಾರೆ. ಬಂಡವಾಳಶಾಹಿ ಪತ್ರಿಕೆಗಳಲ್ಲಿ ಇತರ ಪಕ್ಷಗಳಲ್ಲಿ ಹಾಗೂ ಪಕ್ಷೇತರ ಸ್ಪರ್ಧಿಗಳಲ್ಲಿ ಸೇರಿಹೋಗಿದ್ದ ಮಂಡಲ ಪಂಚಾಯತಿ ಸದಸ್ಯರ ಅಂಕಿ-ಅಂಶಗಳು.

ಈ ಪಂಚಾಯತಿಗಳಲ್ಲಿ ಗುಲ್ಬರ್ಗಾದ "ಅಂಬಲಗಾ" ಮಂಡಲ ಪಂಚಾಯ್ತಿ, ಕೋಲಾರದ ತಾಯಲೂರು ಮಂಡಲ ಪಂಚಾಯ್ತಿಯು ಪಕ್ಷದ ವಶವಾಗಿದೆ. ದ. ಕ. ಜಿಲ್ಲೆಯ ಮೂರು ಮಂಡಲ ಪಂಚಾಯ್ತಿಗಳಲ್ಲಿ ಅತ್ಯಂತ ಹೆಚ್ಚು ಸದಸ್ಯರನ್ನು ಗಳಿಸಿದೆ ಪಕ್ಷ ಕೋಲಾರದ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಮೂರು ಮಂಡಲ ಪಂಚಾಯ್ತಿಗಳಲ್ಲಿ "ಪ್ರಧಾನ"ರು ಯಾರಾಗಬೇಕೆನ್ನುವುದನ್ನು ನಿರ್ಧರಿಸುವ ನಿರ್ಣಾಯಕ ಸ್ಥಿತಿಯಲ್ಲಿದೆ.

ಕೋಲಾರ ಜಿಲ್ಲೆ

ಮುಳಬಾಗಿಲು	50
ಬಾಗೇಪಲ್ಲಿ	33
ಶಿಡ್ಲಘಟ್ಟ	8
ಚಿಂತಾಮಣಿ	3
ಟ್ಟು	94

ಮಂಡಲ ಪಂಚಾಯ್ತಿ ಸ್ಥಾನಗಳು

ಕೋಲಾರ ಜಿಲ್ಲೆ	94
ದ. ಕನ್ನಡ	70
ಬಿಜಾಪುರ	44
ಗುಲ್ಬರ್ಗ	27
ರಾಯಚೂರು	18
ಕೊಡಗು ಜಿಲ್ಲೆ	14
ಧಾರವಾಡ ಜಿಲ್ಲೆ	11
ತುಮಕೂರು ಜಿಲ್ಲೆ	5
ಬಳ್ಳಾರಿ	2
ಉತ್ತರ ಕನ್ನಡ	2
ಹಾಸನ ಜಿಲ್ಲೆ	1
ಚಿಕ್ಕಮಗಳೂರು	1

ಜಿಲ್ಲಾ ಪರಿಷತ್ ಗಳಿಸಿದ ಮತಗಳು

ಸಾವಿರಕ್ಕಿಂತ ಹೆಚ್ಚು ಮತ ಗಳಿಸಿದ ಜಿಲ್ಲಾ ಪರಿಷತ್ ಅಭ್ಯರ್ಥಿಗಳು ಹಾಗೂ ಅವರು ಗಳಿಸಿದ ಮತಗಳು.

ಕೋಲಾರ ಜಿಲ್ಲೆ ಕ್ಷೇತ್ರ	ಅಭ್ಯರ್ಥಿಗಗಳು	ಗಳಿಸಿದ ಮತ
	ಕೋಲಾರ ಜಿಲ್ಲೆ	
ಮಿಟ್ಟೇಮರಿ	ಜಿ. ವಿ. ಶ್ರೀ ರಾಮರೆಡ್ಡಿ	3661
ಗೂಳೂರು	ಸಿ. ಡಿ. ಗಂಗಲಪ್ಪ	3769
ಚೇಳೂರು	ವೆಂಕಟರೆಡ್ಡಿ	3161
ಕಸಬಾ (ಬಾಗೇಪಲ್ಲಿ)	ಪಿ. ವೇಣಮ್ಮ	1800
ಸೋಮೆನಹಳ್ಳಿ	ಆರ್. ನರಸಿಂಹಯ್ಯ	1789
ಕಸಬಾ ಗುಡಿಬಂಡೆ	ಚಿನ್ನಪ್ಪಯ್ಯ	1050
ಯುಗವಕೋಟಿ	ಅಶ್ವಥರೆಡ್ಡಿ	1900
ಚಿಲಕಲನೇರ್ಪು	—	1550
ಕಸಬಾ	ರತ್ನಮ್ಮ	0735
ನಂಗಲಿ	ನಾಗಿರೆಡ್ಡಿ	1200
ತಾಯಲೂರ	ಎಂ. ಕೃಷ್ಣಪ್ಪ	3400
ಆವೂರು	ತಿಮ್ಮಪ್ಪ	1150
ದುಗ್ಗಸಂದ್ರ	ಲಕ್ಷ್ಮಮ್ಮ	1040
ಬೈರಕೂರು (ಬೆಂಬಲಿತ)	ವೆಂಕಟಪ್ಪ	2990
	ಗುಲ್ಬರ್ಗಾ ಜಿಲ್ಲೆ	
ಚಿಂಚಲಸೂರು	ಮಾರುತಿ ಮಾನ್ಪಡೆ	7707
	ರಾಯಚೂರು	
ರಾಂಪುರ	—	1075
ಕಲ್ಮಲ	ಚಂದ್ರಶೇಖರ ಬಾಳಿ	2157
ಯರಗೇರಾ	—	1664
ಯಲ್ಬುರ್ಗಾ	ಶ್ರೀಮತಿ ಮಂಜುಳಾ	1294
	ದ.ಕ. ಜಿಲ್ಲೆ	
ಉಳ್ಳಾಲ	ಜನಾರ್ಧನ ನಾಯಕ್	2862
ಕೋಟೇಕಾರ್	—	2868
ಹರೇಕಳ	—	1500
ಧರ್ಮಸ್ಥಳ	ನಾರಾಯಣ ಮಲೆಕುಡಿಯ	1568
ಕೋಟೇಶ್ವರ	ಶ್ರೀಮತಿ ಸೂರ್ಯಕಾಂತಿ	6630
ಸುಳ್ಯ	ಸೂರ್ಯನಾರಾಯಣ ಭಟ್	1000
	ತುಮಕೂರು ಜಿಲ್ಲೆ	
ಹಾಗಲವಾಡಿ	ಎಚ್. ಜಿ. ಚೆನ್ನಪ್ಪ	1695
	ಕೊಡುಗು ಜಿಲ್ಲೆ	
ಗೋಣಿಕೊಪ್ಪ	ಬೆಂಬಲಿತ ಅಭ್ಯರ್ಥಿ	1667
ಕನವೂರು	ಬೆಂಬಲಿತ ಅಭ್ಯರ್ಥಿ	1400

ಈ ಯಾದಿಯಲ್ಲಿ 1000 ಕ್ಕೂ ಹೆಚ್ಚು ಮತ ಗಳಿಸಿದವರ ಹೆಸರು ಬಿಟ್ಟಿದ್ದರೆ ದಯವಿಟ್ಟು ತಿಳಿಸಿ.

ಅಂಚೆ ತಂತಿ ದರ ಏರಿಕೆಗೆ ಕೆ. ಜಿ. ಎಫ್. ನಲ್ಲಿ ಪ್ರತಿಭಟನೆ

ಕೇಂದ್ರ ಸರ್ಕಾರವು ಅಂಚೆ-ತಂತಿ, ದೂರವಾಣಿ, ರೈಲ್ವೇ ಸರಕು ಸಾಗಣೆ ದರವನ್ನು ಹೆಚ್ಚಿಸಿದ್ದರ ವಿರುದ್ಧ ಸಿ.ಪಿ.ಐ.(ಎಂ.) ಕೆ.ಜಿ.ಎಫ್. ಘಟಕವು ಬಹಿರಂಗ ಸಭೆ, ಬೃಹತ್ ಮೆರವಣಿಗೆ ಹಾಗೂ ಅಂಚೆ-ತಂತಿ ಕಛೇರಿಗಳ ಮುಂದೆ ಪಿಕೆಟಿಂಗ್ ಕಾರ್ಯಕ್ರಮವನ್ನು ಸಂಘಟಿಸಿತು. ಅಂದು ನಡೆದ ಬೃಹತ್ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಸ್ಥಳೀಯ ಸಿ.ಪಿ.ಐ. (ಎಂ) ಶಾಸಕರಾದ ಕಾ. ಟಿ.ಎಸ್. ಮಣಿ, ವಹಿಸಿದ್ದರು. ಕಾ. ಅರ್ಜುನ್ ಅವರು ಸ್ವಾಗತ ಕೋರಿದರು. ಕಾ. ಏಕಾಂಬರಂ ಕಾ. ಟಿ.ಎಸ್. ಅಶ್ವತ್‌ನಾರಾಯಣ್, ಕಾ. ಎಸ್. ಸವರಿದಾಸ್, ಕಾ.ಎ. ಜಯರಾಮ್ ಮುಂತಾದವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಕೇಂದ್ರ ಸರ್ಕಾರದ ಜನ ವಿರೋಧೀ ನೀತಿಯನ್ನು ಖಂಡಿಸಿದರು.

ಅಂದು ಬೆಳಿಗ್ಗೆ 500ಕ್ಕೂ ಹೆಚ್ಚು ಪಕ್ಷದ ಕಾರ್ಯಕರ್ತರು ಮತ್ತು ಬೆಂಬಲಿಗರು ಕೆ.ಜಿ.ಎಫ್.ನ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿದರು. ಬೆಳಿಗ್ಗೆ 10ಗಂಟೆಗೆ ಕೆ.ಜಿ.ಎಫ್.ನ ಮುಖ್ಯ ಅಂಚೆ ಕಚೇರಿಯನ್ನು ತಲುಪಿದ ಮೆರವಣಿಗೆಕಾರರು ಒಂದು ಗಂಟೆ ಕಾಲ ಕಚೇರಿಯ ಕೆಲಸದ ಕಾರ್ಯಗಳನ್ನು ಸ್ತಬ್ದಗೊಳಿಸಿದರು. ನಂತರ ಬಂದ ಪೋಲೀಸರು ಕಾ. ಟಿ.ಎಸ್. ಮಣಿ, ಕಾ. ಸವರಿದಾಸ್ ಮತ್ತು ಕಾ. ಜಯರಾಂ ಅವರುಗಳನ್ನೊಳಗೊಂಡಂತೆ 250 ಪಕ್ಷದ ಸದಸ್ಯರನ್ನು ಬಂಧಿಸಿ ಸಂಜೆ ಬಿಡುಗಡೆ ಮಾಡಿದರು. ಬಿಡುಗಡೆಯಾದ ನಂತರ ಪೋಲೀಸ್ ಠಾಣೆಯ ಮುಂಭಾಗದಲ್ಲಿ ಸಭೆಯನ್ನು ನಡೆಸಿ ಹೋರಾಟ ಇದೀಗ ಆರಂಭಗೊಂಡಿರುವುದಾಗಿಯೂ ಮುಂದೆ ಇದನ್ನು ಇನ್ನೂ ತೀವ್ರಗೊಳಿಸಬೇಕಾಗಿದೆಯೆಂದೂ, ರೈಲು ರೋಖೋ ಚಳವಳಿಯನ್ನು ಹಮ್ಮಿಕೊಳ್ಳುವುದಾಗಿಯೂ ಕಾ. ಟಿ.ಎಸ್. ಮಣಿ ತಿಳಿಸಿದರು.

ವಿಧಾನ ಮಂಡಲದಲ್ಲಿ

ಗೂಂಡಾ ಕಾನೂನಿನ ತಿದ್ದುಪಡಿ ವಿಧಾನಸಭೆಯ ಈ ಅಧಿವೇಶನದ ಮುಖ್ಯ ಕೆಲಸ ಶಾಸನಗಳ ಅಂಗೀಕಾರ. ಅನೇಕ ಶಾಸನಗಳನ್ನು ವಿಧಾನ ಸಭೆಯ ಮುಂದೆ ಮಂಡಿಸಲಾಗಿದೆ. ಹಾಗೂ ಕೆಲವನ್ನು ಅಂಗೀಕರಿಸಲಾಗಿದೆ. ಅವುಗಳಲ್ಲಿ ಗೂಂಡಾಗಳು, ಕಳ್ಳಭಟ್ಟಿಯವರು ಇತ್ಯಾದಿಗಳ ನಿಯಂತ್ರಣ ಅಧಿನಿಯಮ ಒಂದು. ಯಾರನ್ನೇ ಆಗಲಿ ಗೂಂಡಾ ಅಥವಾ ಬೇರೆ ಬೇರೆ ಹೆಸರುಗಳನ್ನಿಟ್ಟು ಸುಳ್ಳು ಆರೋಪ ಹೊರಿಸಿ ವಿಚಾರಣೆಯಿಲ್ಲದ ಸೆರೆಮನೆಯಲ್ಲಿಡಲು ಅವಕಾಶ ಕೊಡುವ ಕಾನೂನುಗಳಿರುವ ಅಧಿನಿಯಮ ಇದು. ಅಧಿಕಾರಿಗಳ ಕೈಯಲ್ಲಿ ಅನಿಯಮಿತ ಅಧಿಕಾರದ ಕೇಂದ್ರೀಕರಣಕ್ಕೆ ಅವಕಾಶ ನೀಡುತ್ತದೆ ಎಂದು ಈ ಕಾನೂನನ್ನು ವಿರೋಧಿಸಿದರು ಸಿ. ಪಿ. ಐ. [ಎಂ]. ಶಾಸಕರು.

ನಗರ ಆಸ್ತಿ ತೆರಿಗೆ ಏರಿಕೆ

ನಗರ ಆಸ್ತಿ ತೆರಿಗೆಯನ್ನು ಏರಿಸಲು ಬೆಂಗಳೂರು ನಗರಸಭೆ ನಡೆಸುತ್ತಿರುವ ಪ್ರಯತ್ನ ಎಲ್ಲರಿಗೂ ತಿಳಿದದ್ದು. ಆಸ್ತಿ ತೆರಿಗೆ ಏರಿಸುವ ಈ ಪ್ರಯತ್ನವನ್ನು ಸಂಪನ್ಮೂಲಗಳ ಸಂಗ್ರಹದ ಹೆಸರಿನಲ್ಲಿ ಈಗಾಗಲೇ ಬೆಲೆ ಏರಿಕೆಯಿಂದ ಪೀಡಿತರಾದ ಜನರನ್ನು ಮತ್ತಷ್ಟು ಸುಲಿಯುವ ಪ್ರಯತ್ನವನ್ನು ಅಲ್ಪ ಕಾಲಾವಧಿ ಚರ್ಚೆಯ ಮೂಲಕ ಸದನದ ಮುಂದೆ ಚರ್ಚಿತವಾಗುವಂತೆ ಮಾಡಿದರು. ಸರ್ಕಾರ ಆಸ್ತಿ ತೆರಿಗೆಯನ್ನು ಏರಿಸುವ ನಗರ ಸಭೆಯ ತೀರ್ಮಾನಕ್ಕೆ ನೀಡುತ್ತಿರುವ ಬೆಂಬಲವನ್ನು ವಿರೋಧಿಸಿ ಸಭಾತ್ಯಾಗ ಮಾಡಿದರು. ಸಿ. ಪಿ. ಐ. [ಎಂ] ಶಾಸಕರು ಇವರ ಜೊತೆ ಕಮ್ಯುನಿಸ್ಟ್ ಹಾಗೂ ಬಿ. ಜೆ. ಪಿ. ಶಾಸಕರು ಕೂಡ ಸಭಾತ್ಯಾಗ ಮಾಡಿದರು.

ಶಿಕ್ಷಣ ವಿಧೇಯಕ

ಮೂರು ವರ್ಷಗಳ ಹಿಂದೆ ಜಿಲ್ಲಾ ಪರಿಷತ್ ವಿಧೇಯಕದ ಜೊತೆ ಜೊತೆಯಲ್ಲಿಯೇ ವಿಧಾನ ಮಂಡಲದ ಅಂಗೀಕಾರ ಪಡೆದು ರಾಷ್ಟ್ರಪತಿಗಳ ಸಹಿಗಾಗಿ ಹೋದ ಶಿಕ್ಷಣ ವಿಧೇಯಕದ ಬಗ್ಗೆ ಆಗಲೇ ಜನಕ್ಕೆ ಮರವೆಯಾಗುತ್ತಾ ಬಂದಿದೆ. ಈ ವಿಧೇಯಕಕ್ಕೆ ಇನ್ನೂ ಕೇಂದ್ರ ಸರಕಾರ ಅನುಮತಿ ನೀಡಿಲ್ಲ. ಈ ಬಗ್ಗೆ ಕಾ|| ವೆಂಕಟರಾಮಯ್ಯನವರ ಪ್ರಶ್ನೆಗೆ ಜನತಾ ಸರಕಾರ, "ಕೇಂದ್ರಸರ್ಕಾರ ಕೆಲವು ವಿವರಗಳನ್ನು ಕೇಳಿದ್ದು ಅದಕ್ಕೆ ಡಿಸೆಂಬರ್ 84 ಹಾಗೂ ಜನವರಿ 85ರಲ್ಲಿಯೇ ಉತ್ತರ ನೀಡಿದೆ. ಆದರೆ ಇಲ್ಲಿಯವರೆಗೂ ಅಧ್ಯಕ್ಷರು ಸಹಿ ಹಾಕಲು ಕೇಂದ್ರ ಸರ್ಕಾರದ ಅನುವು ಮಾಡಿಲ್ಲ." "ಕಾರಣವೇನೆಂದು ಕೇಳಿದರೆ 'ಕೇಂದ್ರ ಸರಕಾರ ಕಾರಣ ನೀಡಿಲ್ಲ" ಎಂಬ ಉತ್ತರ.

ಹರಿಜನ-ಗಿರಿಜನ ವಿದ್ಯಾರ್ಥಿ ನಿಲಯಗಳು

ಹರಿಜನ ಹಾಗೂ ಹಿಂದುಳಿದ ಜನರಲ್ಲಿ ಬೆಳೆಯುತ್ತಿರುವ ವಿದ್ಯಾಕಾಂಕ್ಷೆಗೆ ಅನುಗುಣವಾಗಿ ಸಮೀಪದಲ್ಲಿಯೇ ಹೈಸ್ಕೂಲು, ಕಾಲೇಜುಗಳನ್ನು ಸ್ಥಾಪಿಸಲಾಗಿದೆ, ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಲಾಗದ ಸರ್ಕಾರ ಹರಿಜನ ಗಿರಿಜನ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಒಂದು ತರಗತಿಯಲ್ಲಿ ಅನುತ್ತೀರ್ಣರಾದರೆ ಅವರಿಗೆ ವಿದ್ಯಾಭ್ಯಾಸ ಮುಂದುವರಿಸಲು ಕ್ಯಾರಿ ಓವರ್ ಸೌಲಭ್ಯವಿದ್ದರೂ ವಿದ್ಯಾರ್ಥಿ ನಿಲಯಗಳಿಂದ ಹೊರದಬ್ಬುವ ಪ್ರಯತ್ನ ಮಾಡುತ್ತಿದೆ.

ಕಾಂ. ವೆಂಕಟರಾಮಯ್ಯನವರು ಈ ಬಗ್ಗೆ ಕೇಳಿದ ಪ್ರಶ್ನೆಯೊಂದಕ್ಕೆ ಇಂತಹ "ಕ್ಯಾರಿಓವರ್" ವಿದ್ಯಾರ್ಥಿಗಳಿಗೆ 86-87 ರಲ್ಲಿ ಮಾತ್ರ ಅವಕಾಶ ನೀಡಲಾಯಿತು ಎಂದು ಉತ್ತರ ನೀಡಿದರು. ಕೊನೆಗೆ ಕಾಂ ವೆಂಕಟರಾಮಯ್ಯನವರು ಪಟ್ಟು ಬಿಡದೆ ಕೇಳಿದ ಪ್ರಶ್ನೆಗೆ 87-88 ರಲ್ಲಿಯೂ ಈ ಅವಕಾಶ ನೀಡಲಾಗುವುದೆಂದು ಶಿಕ್ಷಣ ಸಚಿವರು ಒಪ್ಪಿದ್ದಾರೆ.

ಮಹಿಳಾ ಸಂಘಟನೆಯಿಂದ ಐಕ್ಯತಾ ಮಾಸಾಚರಣೆ

ದೇಶದಲ್ಲಿ ಬೆಳೆದು ಬರುತ್ತಿರುವ ಮತ್ತು ಹೆಚ್ಚುತ್ತಿರುವ ವಿಚ್ಛಿದ್ರಕಾರಿ ಶಕ್ತಿಗಳು ಮತ್ತು ಪ್ರತ್ಯೇಕತಾವಾದಿಗಳ ಹಿನ್ನೆಲೆಯಲ್ಲಿ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಕೇಂದ್ರ ಸಮಿತಿಯು ರಾಷ್ಟ್ರದಾದ್ಯಂತ ಪ್ರಜೆಗಳಲ್ಲಿ ಇದರ ಬಗ್ಗೆ ತಿಳಿವು ಮೂಡಿಸಲು ರಾಷ್ಟ್ರಮಟ್ಟದ ಒಂದು ತಿಂಗಳ ರಾಷ್ಟ್ರೀಯ ಐಕ್ಯತೆಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಒಂದು ತಿಂಗಳಲ್ಲಿ, ವಿಚಾರ ಸಂಕೀರ್ಣ, ಒಳಾಂಗಣ ಸಭೆ, ಬಹಿರಂಗಸಭೆ, ಮೆರವಣಿಗೆ, ಜಾಥಾ ಗಳಂತಹ ವಿವಿಧ ಕಾರ್ಯಕ್ರಮಗಳ ಮೂಲಕ ಜನರಲ್ಲಿ ದೇಶಾಭಿಮಾನ ಮತ್ತು ದೇಶದ ಐಕ್ಯತೆಯನ್ನು ಬಲಿಷ್ಟಗೊಳಿಸುವ ಉದ್ದೇಶ ಹೊಂದಿದೆ.

ಇದರ ಹಿನ್ನೆಲೆಯಲ್ಲಿ ರಾಯಚೂರು ಜಿಲ್ಲೆಯಲ್ಲಿ ಈಗಾಗಲೇ ಒಂದು ವಿಚಾರ ಸಂಕೀರ್ಣವನ್ನು ಮಾಡಲಾಯಿತು. ದಿನಾಂಕ 26-1-87ರಂದು ಸಂಜೆ 4 ಗಂಟೆಗೆ ಹಮ್ಮಿಕೊಳ್ಳಲಾದ ಮೆರವಣಿಗೆ ಮತ್ತು ನಂತರದ ಬಹಿರಂಗ ಸಭೆಗೆ ಪೂರಕವಾಗಿ ವಿವಿಧ ಬಡಾವಣೆಗಳಲ್ಲಿ ಸಭೆಗಳನ್ನು ನಡೆಸಲಾಯಿತು.

ಸಿಂಧನೂರಿನ ಶಾಖೆಯು ದಿನಾಂಕ 18-1-87 ರಂದು "ಪ್ರಸ್ತುತ ಪರಿಸ್ಥಿತಿಯಲ್ಲಿ ರಾಷ್ಟ್ರೀಯ ಐಕ್ಯತೆಯ ಮಹತ್ವ" ಎಂಬ ವಿಷಯದ ಬಗ್ಗೆ ಎಂ. ಗೋಪಾಲಕೃಷ್ಣ [ಸಮುದಾಯ ಅಧ್ಯಕ್ಷರು] ಇವರ ಅಧ್ಯಕ್ಷತೆಯಲ್ಲಿ ಎಚ್. ಎಂ. ಭೂತನಾಳ್ [ಸಮಾಜ ಶಾಸ್ತ್ರ ಉಪನ್ಯಾಸಕರು] ಮತ್ತು ಕುಮಾರಿ ಶೋಭಾ [ಸಿಂಧನೂರು ನಗರ ಸಮಿತಿ ಸದಸ್ಯೆ] ಇವರು ವಿಚಾರವನ್ನು ಮಂಡಿಸಿದರು.

ಈಗೇಕೆ 'ಅಧ್ಯಕ್ಷೀಯ ಮಾದರಿ' ಬಗ್ಗೆ ಚರ್ಚೆ ?

– ಕಾ|| ಸುರ್ಜೀತ್

ಆಳುವ ಪಕ್ಷ ದೇಶದ ಆರ್ಥಿಕ ಬಿಕ್ಕಟ್ಟು, ಜನರ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಸೋತಾಗಲ್ಲೆಲ್ಲ ಮತ್ತು ಪಕ್ಷದ ಪರಿಸ್ಥಿತಿ ಶೋಚನೀಯವಾದಾಗಲ್ಲೆಲ್ಲ ಅಧ್ಯಕ್ಷೀಯ ಮಾದರಿಯ ಪ್ರಜಾಪ್ರಭುತ್ವದ ಬಗ್ಗೆ ಚರ್ಚೆ ಆರಂಭಿಸುತ್ತದೆ. ಆದರೆ ಈ ಚರ್ಚೆಯಲ್ಲಿ ಯಾವತ್ತೂ ಈಗಿನ ಪಾರ್ಲಿಮೆಂಟರಿ ಪದ್ಧತಿಯ ದೋಷಗಳೇನು ಎಂದು ಪ್ರಸ್ತಾಪ ಬರುವುದಿಲ್ಲ.

ಈಗ ಅಂಗೀಕರಿಸಿರುವ ಸಂವಿಧಾನ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗ ವಹಿಸಿದವರ ಆಕಾಂಕ್ಷೆಗಳನ್ನು ಈಡೇರಿಸುವ ಉದ್ದೇಶ, ಆದರ್ಶ ಮತ್ತು ನೀತಿಗಳನ್ನು ಹೊಂದಿದೆ. ಸಂವಿಧಾನ ಸಭೆ ಬಂಡವಾಳಶಾಹಿ ಜಗತ್ತಿನ ಎಲ್ಲಾ ಮಾದರಿಗಳನ್ನು ಅಧ್ಯಯನ ಮಾಡಿ ಈಗಿನ ಮಾದರಿಯನ್ನು ಆರಿಸಿದೆ ಎಂದು ಮರೆಯಬಾರದು.

ಕಾಂಗ್ರೆಸ್ ಏಕಸ್ವಾಮ್ಯ ಅಧಿಕಾರಕ್ಕೆ ಅಪಾಯ

ಅಧ್ಯಕ್ಷೀಯ ಮಾದರಿಯ ಬಗ್ಗೆ ಈ ಗುಲ್ಲು ಮೊದಲ ಬಾರಿಗೆ 1967ರಲ್ಲಿ ಆರಂಭವಾಯಿತು. 1967ರಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಪಕ್ಷಗಳು ಅಧಿಕಾರಕ್ಕೆ ಬಂದವು. ಕಾಂಗ್ರೆಸ್ ಏಕಸ್ವಾಮ್ಯಕ್ಕೆ ಭಂಗ ಬಂತು. ಪಾರ್ಲಿಮೆಂಟರಿ ಪದ್ಧತಿ ವಿಫಲವಾಗಿರುವುದು ಅಧ್ಯಕ್ಷೀಯ ಪದ್ಧತಿಯ ಬಗ್ಗೆ ಚರ್ಚೆಗೆ ಕಾರಣವಲ್ಲ ಎಂಬುದು ಸ್ಪಷ್ಟ.

ಮುಂದೆ ಈ ಬಗ್ಗೆ ಚರ್ಚೆಗೆ ಆಸ್ಪದವಾದದ್ದು ತುರ್ತುಪರಿಸ್ಥಿತಿಯ ಕಾಲದಲ್ಲಿ. ಆದರೆ ಈ ಅವಧಿಯಲ್ಲಿ ಅಧ್ಯಕ್ಷೀಯ ಪದ್ಧತಿಯನ್ನು ತರುವ ಕೂಗಿಗೆ ಕಾರಣ ಕೊಟ್ಟದ್ದು, "ಗರೀಬಿ ಹಟಾವೊ" ಕಾರ್ಯಕ್ರಮದ ಮೂಲಕ ಸಾಮಾಜಿಕ-ಆರ್ಥಿಕ ಬದಲಾವಣೆಗೆ ಇದರಿಂದ ಸುಗಮವಾಗುತ್ತದೆ–ಎಂದು.

1982ರಲ್ಲಿ ಅಧ್ಯಕ್ಷೀಯ ಮಾದರಿಯ ಪುನರಾವತಾರ ವಾಯಿತು. ಕಾಂಗ್ರೆಸ್ ಪುನಃ ಅಧಿಕಾರಕ್ಕೆ ಬಂದು, ಮೇಲಿನ ಮೊದಲ ಎರಡು ವರ್ಷದ ದುರಾಡಳಿತದ ಫಲವಾಗಿ ಜನ ಆಗಲೇ ರೊಚ್ಚಿಗೆದ್ದಿದ್ದರು. ಎನ್.ಎಸ್.ಎ., ಇ.ಎಸ್.ಎಂ.ಎ. ಪುನಃ ಜಾರಿಗೆ ಬಂದಿತ್ತು. ರಾಜ್ಯದ ಅಧಿಕಾರಗಳು ಮೊಟಕಾಗುತ್ತ ಬಂದಿದ್ದವು. ಐ.ಎಂ.ಎಫ್. ಸಾಲದ ದುಷ್ಪರಿಣಾಮಗಳ ಬಗ್ಗೆ ಆಗಲೇ ವ್ಯಾಪಕ ಪ್ರತಿಭಟನೆಗಳು ಬಂದಿದ್ದವು. ಕೇಂದ್ರ-ರಾಜ್ಯ ಸಂಬಂಧಗಳನ್ನು ಪುನಃ ರಚಿಸುವ ಬಗ್ಗೆ ಚಳುವಳಿ ತೀವ್ರವಾಗುತ್ತ ಬಂದಿತ್ತು.

ಭಾರತದಲ್ಲಿ ಅಧ್ಯಕ್ಷೀಯ ಪದ್ಧತಿ ಬರಬೇಕು ಎಂಬ ಅಪಸ್ವರಕ್ಕೆ ಮತ್ತೆರಡು ಧ್ವನಿಗಳು ಸೇರಿವೆ. ಈ ಅಧ್ಯಕ್ಷೀಯ ಪದ್ಧತಿ ಎಂದರೇನು ಯಾವ ಅಧ್ಯಕ್ಷೀಯ ಪದ್ಧತಿ ಬಗ್ಗೆ ಈ ಚರ್ಚೆ ? ತಿಳಿಯುವ ಒಂದು ಪ್ರಯತ್ನ.

ಬಿ. ಜೆ. ಪಿ. ಹೊರತು ಪಡಿಸಿ ಎಲ್ಲಾ ವಿರೋಧ ಪಕ್ಷಗಳು ಅಕ್ಟೋಬರ್ 1983 ರಲ್ಲಿ ಸಭೆ ಸೇರಿ ಹೊರಡಿಸಿದ ಹೇಳಿಕೆ ಇದರ ಫಲವಾಗಿತ್ತು. ಈ ಮಧ್ಯೆ ಕೇಂದ್ರ ಸಚಿವ ವಸಂತಸಾಠೆಯವರು ಅಧ್ಯಕ್ಷೀಯ ಮಾದರಿ ಬಗ್ಗೆ ಬೊಬ್ಬೆ ಆರಂಭಿಸಿದ್ದಾರೆ. ಈ ಸಾರಿ ಕಾರಣ ಪುನಃ ಬೇರೆಯಾಗಿದೆ. ರಾಷ್ಟ್ರದ ಐಕ್ಯತೆ, ಕಾಪಾಡಲು ಅಧ್ಯಕ್ಷೀಯ ಮಾದರಿ ಅಗತ್ಯ ಎಂದು ಪ್ರಚಾರ ನಡೆದಿದೆ. ಆದರೆ ನಿಜವಾದ ಕಾರಣ ಏನೂ ಬೇರೆಯಾಗಿಲ್ಲ.

ಹೆಗ್ಡೆಯವರ ತರ್ಕ

ಅಧ್ಯಕ್ಷೀಯ ಮಾದರಿ ಸರಕಾರಕ್ಕೆ ವಿರೋಧ ಪಕ್ಷಗಳಿಂದಲೂ ಬೆಂಬಲ ಬಂದಿದೆ. ಜನತಾ ಪಕ್ಷದ ಹೆಗ್ಡೆ, ಬಿ. ಜೆ. ಪಿ. ಇದಕ್ಕೆ ಪರವಾಗಿ ಮಾತನಾಡಲಾರಂಭಿಸಿದ್ದಾರೆ.

ಹೆಗ್ಡೆಯವರ ಪ್ರಕಾರ, ಭಾರತದಲ್ಲಿ ಎರಡು ಸಮಬಲದ ಪಕ್ಷಗಳು ಮೂಡಿ ಬರಲಿಲ್ಲ. ಆದ್ದರಿಂದ ಜನರಿಗೆ ಈಗ ಬದಲಿಯೇ ಇಲ್ಲ. ರಾಜಕೀಯ ಪಕ್ಷಗಳು ಇದರಿಂದ ನಿರುಪಯುಕ್ತವಾಗಿವೆ. ದೇಶದ ಮುಖ್ಯ ಅಧಿಕಾರಿಗೆ ಇನ್ನೊಬ್ಬ ಬದಲಿ ವ್ಯಕ್ತಿ ತಯಾರಾಗುವ ಸಾಧ್ಯತೆಯೇ, ಈಗಿನ ಪದ್ಧತಿಯಲ್ಲಿ ಇಲ್ಲ. ಅಧ್ಯಕ್ಷೀಯ ಪದ್ಧತಿ ಈ ಬಿಕ್ಕಟ್ಟಿಗೆ ಪರಿಹಾರವಾಗಬಲ್ಲದು ಎಂಬುದು ಅವರ ತರ್ಕ.

(5ನೇ ಪುಟ ನೋಡಿ)

ಹೆಗಡೆ ಮತ್ತು ಅಧ್ಯಕ್ಷೀಯ ಮಾದರಿ

ನಮ್ಮ ದೇಶದಲ್ಲಿ ಅಧ್ಯಕ್ಷೀಯ ಮಾದರಿಯ ಆಡಳಿತೆಯನ್ನು ಸ್ಥಾಪಿಸುವ ಸಲುವಾಗಿ ನಮ್ಮ ಸಂವಿಧಾನದಲ್ಲಿ ಸೂಕ್ತ ಬದಲಾವಣೆ ತರಬೇಕೆಂದು ಕರ್ನಾಟಕದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಪುನಃ ಪ್ರತಿಪಾದಿಸಿದ್ದಾರೆ.

ಮುಂಬಯಿಯಲ್ಲಿ ಭಾರತೀಯ ವಾಣಿಜ್ಯ ಮಹಾಸಭೆಯ ದತ್ತಿ ಪ್ರಶಸ್ತಿಯ ಸಮಾರಂಭದಲ್ಲಿ ಅಧ್ಯಕ್ಷೀಯ ಭಾಷಣ ಮಾಡುತ್ತಿದ್ದಾಗ ಆ ಅಭಿಪ್ರಾಯ ವ್ಯಕ್ತಮಾಡಿದರು. ಇಂಥ ನಿರ್ಧಾರಕ್ಕೆ ಬರಲು ಕಾರಣವೇನು ಗೊತ್ತೇ? ಈಗಿನ ಪದ್ಧತಿ ಒಂದು ಪಕ್ಷದ ಆಡಳಿತೆಗೆ ಅನುವು ಮಾಡಿಕೊಟ್ಟದಯಷ್ಟೇ ಅಲ್ಲ, ಅದಕ್ಕಿಂತಲೂ ಅಪಾಯಕಾರಿಯಾದ ಒಂದು ಪಾರ್ಟಿ ಪದ್ಧತಿಯನ್ನು ಜ್ಯಾರಿಯಲ್ಲಿ ತಂದಿದೆ ಅಥವಾ ಅದರತ್ತ ಸಾಗುತ್ತಿದೆ. ಆ ಅಪಾಯದಿಂದ ದೇಶವನ್ನು ನಾವು ರಕ್ಷಿಸಬೇಕಾಗಿದೆಂದು ಹೆಗಡೆಯವರು ವಾದಿಸಿದ್ದಾರೆ.

ರಾಮಕೃಷ್ಣ ಹೆಗಡೆಯವರು ನಮ್ಮ ದೇಶದಲ್ಲಿರುವ ಪಾರ್ಲಿಮೆಂಟರಿ ಪದ್ಧತಿಯನ್ನು ತೆಗೆದುಹಾಕಿ ಅಧ್ಯಕ್ಷೀಯ ಪದ್ಧತಿಯ ಸರಕಾರ ಬರಲೆಂದು ಪ್ರತಿಪಾದಿಸುತ್ತಿರುವಾಗಲೇ ಅದೇ ಸಮಯದಲ್ಲಿ ಅಧ್ಯಕ್ಷೀಯ ಪದ್ಧತಿಯ ಆಡಳಿತೆ ಎಷ್ಟು ಅಪಾಯಕಾರಿಯಾಗಿದೆಂಬ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ಕಾಕತಾಳೀಯದಂತಿದೆ. ಹೆಗಡೆಯವರ ವಾದವನ್ನು ದಪ್ಪಕ್ಷರದಲ್ಲಿ ಪ್ರಕಟಿಸಿದ ಆ ದಿನ ಪತ್ರಿಕೆ ಅಧ್ಯಕ್ಷೀಯ ಮಾದರಿ ಆಡಳಿತೆ ಎಂಥ ಗಂಡಾಂತರವನ್ನು ತಂದೊಡ್ಡ ಬಹುದೆಂಬುದರ ಕಡೆ ಗಮನ ಸೆಳೆದಿದೆ. ಅದು ಅಮೇರಿಕದ ಅಧ್ಯಕ್ಷ ರೇಗನರ ಪೌರುಷ. "ಇರಾನ್ ಜತೆಗಿನ ವ್ಯವಹಾರದಲ್ಲಿ ಗಂಭೀರ ತಪ್ಪುಗಳು ಆಗಿವೆ. ಹಗರಣದ ಕುರಿತು ವೈಯಕ್ತಿಕ ಹೊಣೆ ಹೊರೆಲಾರೆ. ಮಧ್ಯ ಅಮೇರಿಕದಲ್ಲಿ ರಷ್ಯಾ ಕಾಲು ಊರಲು ಸಾಧ್ಯವಾಗದಂತೆ ಹೋರಾಟ ಮುಂದುವರಿಸುತ್ತೇನೆ. ಆಕಾಶ ಯುದ್ಧ ವೆಚ್ಚಕ್ಕೆ ಕಾಂಗ್ರೆಸ್ ಕತ್ತರಿ ಹಾಕಿದರೆ ವಿಟೋ ಅಧಿಕಾರ ಚಲಾಯಿಸುತ್ತೇನೆ"ಎಂದು ಎಚ್ಚರಿಕೆ ನೀಡಿದರು ರೇಗನ್ ಅಮೇರಿಕದ ಸಂಸತ್ತಿನಲ್ಲಿ ಅವರು ಭಾಷಣಮಾಡುತ್ತಿದ್ದರು. ಅಚ್ಚರಿಯ ಸಂಗತಿ ಎಂದರೆ ರೇಗನರ ಕಡೆಯ ಎರಡು ವರ್ಷಗಳ ಅಧಿಕಾರಾವಧಿಯಲ್ಲಿ ಹಲವಾರು ಘೋಷಿತ ಕಾರ್ಯಕ್ರಮಗಳನ್ನು–ಅಂದರೆ ಆಕಾಶ ಯುದ್ಧ, ನಿಕರಾಗುವ ಸರಕಾರದ ವಿರೋಧಿಗಳಿಗೆ ಶಸ್ತ್ರಾಸ್ತ್ರ ಪೂರೈಕೆ ಮೊದಲಾದವು ತಿರಸ್ಕರಿಸಿರುವ ಡೆಮೋಕ್ರಾಟಿಕ್ ಪಕ್ಷದ ಬಹುಮತವಿರುವ ಸಂಸತ್ತಿನಲ್ಲಿ ರೇಗನ್ನರ ಆ ಭಾಷಣಕ್ಕೆ ಎಲ್ಲಾ ಸದಸ್ಯರೂ ಹರ್ಷೋದ್ಗಾರಗಳಿಂದ ಪ್ರತಿಕ್ರಿಯೆ ವ್ಯಕ್ತಪಡಿಸಿರುವುದು. Star War ಅಪಾಯವನ್ನು ವಿವರಿಸಿದರೆ ಒಳ್ಳೆದು.

ಅಧ್ಯಕ್ಷೀಯ ಮಾದರಿಯ ಆಡಳಿತೆಯ ಅಪಾಯಗಳನ್ನು, ನಮ್ಮ ದೇಶದಲ್ಲಿ ಕಾಂಗ್ರೆಗೆ ಪರ್ಯಾಯ ಪಕ್ಷದ ಅಥವಾ ಬಲಿಷ್ಟ ಐಕ್ಯ ವಿರೋಧ ಹುಟ್ಟಿ ಬರಲಿಕ್ಕೆ ಉಂಟಾಗಿರುವ ಕಾರಣಗಳನ್ನೂ ಇದೇ ಪುಟದಲ್ಲಿ ಇತರ ಲೇಖನಗಳಲ್ಲಿ ಓದಿ ತಿಳಿದುಕೊಳ್ಳಬಹುದಾಗಿದೆ.

ದೇಶ ಎದುರಿಸುತ್ತಿರುವ ಏಕಪಕ್ಷ ಏಕವ್ಯಕ್ತಿ ಆಡಳಿತೆ ಪರಿಹಾರವಲ್ಲ, ಅದು ಪ್ರಜಾಪ್ರಭುತ್ವ ಪದ್ಧತಿಗೇನೇ ಅಪಾಯಕಾರಿ. ವಿರೋಧ ಪಕ್ಷಗಳ, ಸಾಮಾನ್ಯ ಜನತೆಯ ಅಭಿಪ್ರಾಯಗಳನ್ನೂ, ದೇಶದ ಹಿತಗಳನ್ನೂ ಕಡೆಗಣಿಸಿ, ಅಧ್ಯಕ್ಷನಾಗಿದ್ದವ ತನ್ನ ಗುರಿಯನ್ನು ಸಾಧಿಸಲು ಪೂರ್ಣ ಅವಕಾಶ ಮಾಡಿಕೊಡುವುದೇ, ದೇಶಕ್ಕೆ ಗಂಡಾಂತರವನ್ನುಂಟು ಮಾಡುವುದೇ ಆ ಪದ್ಧತಿಯ ವಿಕ್ರಮವಾಗಬಹುದು.

ತನ್ನ ಪಕ್ಷದ ರಾಜಕೀಯ ದಿವಾಳಿಖೋರತನದ, ಸಂದರ್ಭ ಸಾಧಕ ನಿಲುಮೆಗಳಿಂದ ಉಂಟಾದ ವೈಫಲ್ಯಗಳಿಂದ ನಿರಾಶೆಗೊಂಡ ರಾಮಕೃಷ್ಣ ಹೆಗಡೆಯವರು ಕುರುಡರು ಆನೆಯ ಅಂಗಾಂಗಗಳನ್ನು ಮುಟ್ಟಿ ಅದುವೇ ಆನೆಯೆಂದು ಹೇಳುವಂತೆ ಅಧ್ಯಕ್ಷೀಯ ಮಾದರಿ ಆಡಳಿತೆಯೇ ಭಾರತ ದೇಶದ ಸಂಕಷ್ಟಗಳ ನಿವಾರಣೆಗೆ, ಏಕಪಕ್ಷ ಆಡಳಿತೆಯ ನಿರ್ನಾಮಕ್ಕೆ ರಾಮಬಾಣವೆಂದು ತಿಳಿದಿರುವುದು ಅವರ ರಾಜಕೀಯ ದೃಷ್ಟಿಕೋನದ ವೈಫಲ್ಯವನ್ನೂ ನಿರಾಶೆಯನ್ನೂ ತೋರ್ಪಡಿಸುತ್ತದೆ.

ಎನ್. ಕೆ. ಉಪಾಧ್ಯಾಯ

"ಅಮೆರಿಕನ್ ಮಾದರಿ" ಅಧ್ಯಕ್ಷೀಯತೆ

'ಇರಾನ್ ಸ್ಕ್ಯಾಮ್' ಹಗರಣದ ನಂತರ ಸಾಮಾನ್ಯ ಅಮೆರಿಕನ್ನರು ಯಾರನ್ನೂ ನಂಬುತ್ತಿಲ್ಲ ಎಂಬ ಸುದ್ದಿಯನ್ನು ನೀವು ಓದಿರಬಹುದು. ಒಂದು ಅಭಿಪ್ರಾಯ ಸರ್ವೆಯ ಪ್ರಕಾರ48% ಅಮೆರಿಕನ್ನರು ಅಧ್ಯಕ್ಷ ರೇಗನ್‌ರನ್ನು ನಂಬುತ್ತಿಲ್ಲ, 56% ಮಂದಿ ಡೆಮಾಕ್ರಾಟಿಕ್ ಪಕ್ಷದ ಕಾಂಗ್ರೆಸ್ ಸದಸ್ಯರಲ್ಲಿ ಅಪನಂಬಿಕೆಯಿದ್ದರೆ, ರಿಪಬ್ಲಿಕನ್ನರನ್ನು 59% ಜನ ನಂಬುತ್ತಿಲ್ಲ. ಪತ್ರಿಕೆಗಳನ್ನು ನಂಬದವರ ಸಂಖ್ಯೆಕೂಡಾ 37% ಕ್ಕೇರಿದೆಯಂತೆ.

ಇದೀಗ "ಅಮೆರಿಕನ್ ಮಾದರಿ"ಯ ಯಶಸ್ಸಿನ ಒಂದು ಅಳತೆಗೋಲು. ಆದರೆ ಈ ಅಮೆರಿಕನ್ ಮಾದರಿಯೆಂದರೇನು? ಸ್ಥೂಲವಾಗಿ ಹೀಗೆ ಹೇಳಬಹುದು— ಇವರಲ್ಲಿ ಶಾಸಕಾಂಗ, ಕಾರ್ಯಾಂಗ, ಹಾಗೂ ನ್ಯಾಯಾಂಗ ಇವು ಸ್ವತಂತ್ರವಾದ ಮತ್ತು ಪರಸ್ಪರ ಹತೋಟಿಯಿಡುವ ಅಂಗಗಳು. ಒಕ್ಕೂಟದ ಶಾಸಕಾಂಗವನ್ನು ಕಾಂಗ್ರೆಸ್ ಎನ್ನುತ್ತಾರೆ. ಇದರಲ್ಲಿ ಎರಡು ಸದನಗಳಿವೆ—ಪ್ರತಿನಿಧಿಸಭೆ ಹಾಗೂ ಸೆನೆಟ್ ಒಂದರಲ್ಲಿ ದೇಶದ 50 ರಾಜ್ಯಗಳು ತಮ್ಮ ಜನಸಂಖ್ಯೆಗನುಗುಣವಾಗಿ ಪ್ರಾತಿನಿಧ್ಯ ಹೊಂದಿದ್ದರೆ, ಇನ್ನೊಂದರಲ್ಲಿ ಪ್ರತಿಯೊಂದು ರಾಜ್ಯಕ್ಕೂ ಸಮಾನ ಪ್ರಾತಿನಿಧ್ಯ. ಕಾರ್ಯಾಂಗದ ಮುಖ್ಯಸ್ಥ ಅಧ್ಯಕ್ಷ (ರಾಜ್ಯಗಳಲ್ಲಿ ಗವರ್ನರ್) ಇವರನ್ನು ಜನತೆಯೇ ನೇರವಾಗಿ ನಾಲ್ಕು ವರ್ಷಗಳ ಅವಧಿಗೆ ಆರಿಸುತ್ತಾರೆ. ಒಬ್ಬ ವ್ಯಕ್ತಿ ಎರಡು ಅವಧಿಗಳಿಗಷ್ಟೇ ಅಧ್ಯಕ್ಷನಾಗಲು ಸಾಧ್ಯ.

ಅಧ್ಯಕ್ಷನಿಗೆ ಕಾಂಗ್ರೆಸ್ ಮೇಲೆ ಕ್ರಾಂತಿ-ಪೂರ್ವ ರಶ್ಯಾದ ಕುಖ್ಯಾತ ದೊರೆ ಝಾರ್ ತನ್ನ 'ಪ್ರಜಾಪ್ರತಿನಿಧಿಸಭೆ'ಯ ಮೇಲೆ ಇದ್ದುದಕ್ಕಿಂತ ವ್ಯಾಪಕವಾದ ಹತೋಟಿಯಿದೆ ಎಂದಿದ್ದರು ಮಾರ್ಮಿಕವಾಗಿ ಪ್ರಖ್ಯಾತ ವಿಡಂಬನಕಾರ ಮಾರ್ಕ್ ಟ್ವೇನ್.

ಅಧ್ಯಕ್ಷನಿಗೆ ಕಾಂಗ್ರೆಸ್‌ನ ಮೇಲೆ ಒತ್ತಡ ಹೇರುವ, ಎರಡೂ ಸದನಗಳು ಅಂಗೀಕರಿಸಿದ ಮಸೂದೆಗಳನ್ನು ವಿಟೋ ಮಾಡುವ, ಅದನ್ನು ವಿಳಂಬ ಮಾಡುವ ಹಾಗೂ ಹಲವಾರು 'ಪ್ರಜಾಪ್ರಭುತ್ವ ವಿರೋಧಿ' ಎಂದು ಅಮೆರಿಕನ್ನರೇ ಪರಿಗಣಿಸುವ ಅಧಿಕಾರಗಳಿವೆ.

ಅಮೆರಿಕಾದಲ್ಲಿನಷ್ಟು ದೀರ್ಘವಾಗಿ ಜಗತ್ತಿನ ಬೇರೆಲ್ಲೂ ಚುನಾವಣೆಗಳು ನಡೆಯುವುದಿಲ್ಲ. ಅಧ್ಯಕ್ಷೀಯ ಚುನಾವಣೆಗಳು ನಡೆಯುವ ಮೊದಲು ಎಲ್ಲಾ ರಾಜ್ಯಗಳಲ್ಲಿ ಎರಡು ಪ್ರಮುಖ ಪಕ್ಷಗಳು ತಮ್ಮ ಅಭ್ಯರ್ಥಿಯನ್ನು ಆಯ್ಕೆ ಮಾಡಲು ಪ್ರಾಥಮಿಕ ಚುನಾವಣೆಗಳನ್ನು ನಡೆಸುತ್ತವೆ. ಇದು ಅಮೆರಿಕನ್ ಪ್ರಜಾಸತ್ತೆಯ ಒಂದು ವೈಶಿಷ್ಟ್ಯವೆನ್ನಲಾಗುತ್ತಿದೆ. ಆದರೆ ಇದಕ್ಕೆ ಇನ್ನೊಂದು ಮುಖವೂ ಇದೆ–ಒಬ್ಬ ಅಧ್ಯಕ್ಷ ತನ್ನ ನಾಲ್ಕು ವರ್ಷಗಳ ಅವಧಿಯಲ್ಲಿ ಎರಡು ವರ್ಷಗಳನ್ನು ಮರು ಚುನಾವಣೆಗಾಗಿ ಕಳೆಯುತ್ತಾನೆ ಎಂದು ಲೇವಡಿ ಮಾಡಲಾಗುತ್ತಿದೆ.

ಕೇವಲ 50 ವರ್ಷಗಳ ಹಿಂದೆಯಷ್ಟೇ ಈ ದೇಶದ ಒಟ್ಟು ಖರ್ಚಿನ 75%ನ್ನು ರಾಜ್ಯಗಳು ನಡೆಸುತ್ತಿದ್ದವು. ಈಗ ಅದು 30%ಕ್ಕಿಳಿದಿದೆ. ಈ ಬಗ್ಗೆ ಹಲವಾರು ಅಮೆರಿಕನ್ನರಲ್ಲಿ ಅಸಂತೃಪ್ತಿ ಕಂಡು ಬರುತ್ತಿದೆ. ಇದನ್ನು ಶಮನ

(6ನೇ ಪುಟ ನೋಡಿ)

ಬದಲಿ ಮಾದರಿಯಲ್ಲ - ಎಡ ಪರ್ಯಾಯ

(4ನೇ ಪುಟದಿಂದ)

ಹೆಗ್ಡೆಯವರು 77-79 ರ ಅವಧಿಯಲ್ಲಿ ಜನತಾ ಪಕ್ಷ ಬದಲಿ ನೀತಿಯನ್ನು ಪ್ರತಿಪಾದಿಸದಿದ್ದುದರಿಂದ ವಿಫಲಗೊಂಡಿತು ಎಂಬುದನ್ನು ಮರೆಯುತ್ತಾರೆ. ರಾಜಕೀಯ ಪಕ್ಷಗಳು ನಿರುಪಯುಕ್ತವಾದರೆ ಅಧ್ಯಕ್ಷೀಯ ಮಾದರಿಯೂ ಕೆಲಸ ಮಾಡುವುದಿಲ್ಲ, ಹೆಗ್ಡೆಯವರು ಈಗಿನ ಆಳುವ ಪಕ್ಷದ ನಾಯಕನಿಗೆ ಬದಲಿ ನಾಯಕ ಒದಗಿಸುವುದೊಂದೇ ಸಮಸ್ಯೆ ಎಂದುಕೊಂಡಂತಿದೆ, ಇದೂ ಬದಲಿ ನೀತಿಯುಳ್ಳ, ಇನ್ನೊಂದು ಪಕ್ಷ ಮೂಡಿಬರದೆ ಸಾಧ್ಯವಿಲ್ಲ.

ಅಧ್ಯಕ್ಷ ಮಾದರಿಯಲ್ಲಿ ರಾಜ್ಯಗಳಿಗೆ ಹೆಚ್ಚು ಸ್ವಾಯತ್ತತೆಸಾಗುತ್ತದೆಯೆಂಬ ಹೆಗ್ಡೆ ತರ್ಕ ಬಹಳ ವಿಚಿತ್ರವಾದದ್ದು.

ಹೀಗೆ ಆಳುವ ಪಕ್ಷ ಮಾತ್ರವಲ್ಲ, ವಿರೋಧ ಪಕ್ಷದ ನಾಯಕರೂ,ಇಂದಿದ್ದ ರಾಜಕೀಯ-ಆರ್ಥಿಕ ಬಿಕ್ಕಟ್ಟನ್ನು ಅರ್ಥಮಾಡಕೊಳ್ಳದೆ ಅಧ್ಯಕ್ಷ ಮಾದರಿಗೆ ಮೊರೆ ಹೋಗುತ್ತಿದ್ದಾರೆ.

ಬಿ. ಜೆ. ಪಿ. ಯ ನೀತಿ

"ಹಿಂದೂ ರಾಷ್ಟ್ರ"ಕಟ್ಟುವ ಉದ್ದೇಶ ಹೊಂದಿರುವ ಬಿ. ಜೆ. ಪಿ. ಅಧ್ಯಕ್ಷ ಮಾದರಿಯನ್ನು ಬೆಂಬಲಿಸುವುದು ಆಶ್ಚರ್ಯವೇನಲ್ಲ. ಆದರು ಮೊದಲ ಬಾರಿಗೆ ಬಿ. ಜೆ. ಪಿ. ಇದಕ್ಕೆ ಬೆಂಬಲವಿತ್ತಿದೆ. ಬಿ. ಜೆ. ಪಿ. ಅಧ್ಯಕ್ಷ ಅದ್ವಾನಿಯವರು ದೇಶದ ವಿಛಿದ್ರಕಾರಿ ಶಕ್ತಿಗಳನ್ನು ಬಡಿದೋಡಿಸಲು, ಕೇಂದ್ರದಲ್ಲಿ ಪ್ರಬಲ ಸರ್ಕಾರ ಕಟ್ಟುವಲ್ಲಿ ಅಧ್ಯಕ್ಷೀಯ ಮಾದರಿ ಅನುಕೂಲಕರ ಎಂದಿದ್ದಾರೆ.

ಬಿ. ಜೆ. ಪಿ. ಭಾಷಾವಾರು ರಾಜ್ಯ ವಿಂಗಡಣೆಯ ನೀತಿಯನ್ನು ಪ್ರಶ್ನಿಸುತ್ತದೆ. ಭಾರತ ಹಲವು ಭಾಷಾ ಜನಾಂಗಗಳುಳ್ಳ ದೇಶ ಎಂಬುದನ್ನು ನಿರಾಕರಿಸುತ್ತದ. ಭಾರತ ಫೆಡರಲ್ ತತ್ವಗಳನ್ನು ಬಿಟ್ಟುಕೊಡಬೇಕು. ಕೇವಲ ಆಡಳಿತಕ್ಕಾಗಿ ಸುಮಾರು 60 "ಜನಪದ"ಗಳಾಗಿ ದೇಶವನ್ನು ವಿಂಗಡಿಸಬೇಕು. ಎಂಬುದು ಬಿ. ಜೆ. ಪಿ. ಯ ನೀತಿ. ತನ್ನ "ಹಿಂದೂ ರಾಷ್ಟ್ರ" ಕಟ್ಟುವ ತರಾತುರಿಯಲ್ಲಿ, ದೇಶದ ಸ್ವಾತಂತ್ರ್ಯ ಚಳುವಳಿಯ ಚರಿತ್ರೆಯನ್ನೇ ಬಿ. ಜೆ. ಪಿ. ಮರೆಯುತ್ತಿದೆ.

ಈಗಾಗಲೇ ಹೇಳಿದ ಹಾಗೆ ಈ ಮೂರು ಪಕ್ಷಗಳ ವಕ್ತಾರರು ಈಗಿನ ಪದ್ಧತಿಯ ದೋಷಗಳೇನು ಎಂದು ವಿವರಿಸುತ್ತಿಲ್ಲ. ರಾಜಕೀಯ ಪಕ್ಷಗಳಾಗಿ ತಮ್ಮ ವೈಫಲ್ಯವನ್ನೂ, ಆರ್ಥಿಕ ಬಿಕ್ಕಟ್ಟಿನ ನೇರ ಪರಿಣಾಮವಾದ ರಾಜಕೀಯ ಬಿಕ್ಕಟ್ಟಿಗೆ ಸಂಬಂಧಿಸಲು ಇವು ಹಿಂಜರಿಯುತ್ತಿವೆ. ಅದರ ಬದಲು ಜನರ ಗಮನವನ್ನು ಬೇರೆ ಕಡೆಗೆ ಹರಿಸಲು ಅಧ್ಯಕ್ಷ ಮಾದರಿ ಬಗ್ಗೆ ಮಾತನಾಡುತ್ತಿದ್ದಾರೆ. ಬಡತನ ಮತ್ತು ನಿರುದ್ಯೋಗ ಸಮಸ್ಯೆ ಪರಿಹರಿಸಲು ಪಾರ್ಲಿಮೆಂಟರಿ ಪದ್ಧತಿ ಅಡ್ಡ ಬಂದಿದೆಯೆ ? ಗುತ್ತೇದಾರಿ ಬಂಡವಾಳ-ಭೂಮಾಲಕರು ದಿನೇ ದಿನೇ ಕೊಬ್ಬುತ್ತಿರುವುದು ಪಾರ್ಲಿಮೆಂಟರಿ ಪದ್ಧತಿಯಿಂದಲೇ ? ಎಂದು ಇವರನ್ನು ಕೇಳಬೇಕಾಗಿದೆ.

ಎಡ ರಂಗಗಳ ಮಾದರಿ

ಅಧ್ಯಕ್ಷ ಮಾದರಿಯ ಈ ಸಮರ್ಥಕರು ಎಡರಂಗಗಳ ಅನುಭವದಿಂದ ಪಾಠ ಕಲಿಯಬೇಕು. ಈ ಎಡರಂಗ ಸರ್ಕಾರಗಳ ಬದಲಿ ಕಾರ್ಯಕ್ರಮ, ನೀತಿಯನ್ನು ಪ್ರತಿನಿಧಿಸುವುದರಿಂದ ಕಳೆದ 10 ವರ್ಷಗಳಲ್ಲಿ ಇವು ಬೆಳೆದಿವೆ. ಸಧೃಢವಾಗಿದೆ. ಜನಬೆಂಬಲ ಗಳಿಸಿಕೊಂಡಿವೆ. ಒಂದು ಬದಲಿ ರಾಜಕೀಯ ಶಕ್ತಿಯಾಗಿದೆ.

ಭಾರತದಲ್ಲಿ ಬೂರ್ಜ್ವಾ ಕನಸಿನ ಎರಡು-ಪಕ್ಷ ಪದ್ಧತಿ ಎಂದೂ ಬರಲಾರದು. ಬೂರ್ಜ್ವಾ ಬದಲಿಯ ಎಲ್ಲಾ ಸಾಧ್ಯತೆಗಳು ಇಂದು ಇಲ್ಲವಾಗಿವೆ. ಎಡಪಕ್ಷಗಳು ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಸೇರಿ ಬದಲಿ ಯಾಗಬಲ್ಲವು. ಹಲವರು ಇದನ್ನು ಒಪ್ಪದಿರಬಹುದು, ಇಷ್ಟಪಡದಿರಬಹುದು. ಆದರೆ ಇದು ನಿಜ ಸಂಗತಿ.

ಅಧ್ಯಕ್ಷೀಯ ಮಾದರಿಗೆ ಬದಲಿಸುವುದರ ಅರ್ಥ ಏನು ಎಂದು ತಿಳಿಯಬೇಕಾಗಿದ್ದರೆ ನಾವು ನಮ್ಮ ನೆರೆಯೊರೆಯ ದೇಶಗಳನ್ನು ನೋಡಬೇಕು. ಪಾಕಿಸ್ತಾನ, ಬಾಂಗ್ಲಾದೇಶ, ಶ್ರೀಲಂಕಾ ಈ ದೇಶಗಳಲ್ಲಿ ಈ ಮಾದರಿ ಯಾವುದೇ ಸಮಸ್ಯೆಗಳನ್ನು ಬಗೆಹರಿಸಿಲ್ಲ. ಮಾತ್ರವಲ್ಲ, ನೇರ ಮಿಲಿಟರಿ ಆಡಳಿತಕ್ಕೆ ದಾರಿ ಮಾಡಿಕೊಟ್ಟದೆ. ಈ ದೇಶಗಳಲ್ಲಿ ಭಾಷಾ ಜನಾಂಗಗಳ ಸಮಸ್ಯೆಯನ್ನು "ಅಧ್ಯಕ್ಷೀಯ ಮಾದರಿ" ವಿಷಮಗೊಳಿಸಿರುವುದೂ ಅಷ್ಟೇ ಸ್ಪಷ್ಟ. ಆದ್ದರಿಂದ ಎಡ ಪ್ರಜಾಪ್ರಭುತ್ವ ಶಕ್ತಿಗಳು ಮತ್ತು ಎಲ್ಲಾ ಉದಾರವಾದಿಗಳು "ಅಧ್ಯಕ್ಷ ಮಾದರಿ" ಯ ಪೊಳ್ಳುತನವನ್ನು ಬಯಲು ಮಾಡಬೇಕು.

ಇದರರ್ಥ ಇಂದಿನ ಪದ್ಧತಿಯಲ್ಲಿ ಯಾವುದೇ ಬದಲಾವಣೆ ಅಗತ್ಯವಿಲ್ಲ ಎಂದರ್ಥವಲ್ಲ. ಆರ್ಥಿಕ, ರಾಜಕೀಯ ರಚನೆಯಲ್ಲಿ ಆಮೂಲಾಗ್ರ ಬದಲಾವಣೆ ಮಾಡುವುದೇ ನಮ್ಮ ಪಕ್ಷ ಮುಂದಿಟ್ಟಿರುವ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಗುರಿ. ಆದರೆ ಈಗಿನ ಕಾಲಘಟ್ಟದಲ್ಲಿ ಪಾರ್ಲಿಮೆಂಟರಿ ಪದ್ಧತಿ [ನಾವು ಸೂಚಿಸಿರುವ ಪ್ರಜಾಪ್ರಭುತ್ವ ಬಲಪಡಿಸುವ ಕ್ರಮಗಳೊಂದಿಗೆ] ಪ್ರಜಾಸತ್ತಾತ್ಮಕ ಮುನ್ನಡೆಗೆ ಅಗತ್ಯ. ಆದಕ್ಕಾಗಿ ಹೋರಾಡಬೇಕು.

ಸಂಗ್ರಹಾನುವಾದ : ಶರತ್‌ಚಂದ್ರ

ಅಧ್ಯಕ್ಷೀಯ ಪದ್ಧತಿ ಎಂದರೇನು ?

ಅಧ್ಯಕ್ಷೀಯ ಪದ್ಧತಿ ಎಂದರೇನು ? ಅಧ್ಯಕ್ಷೀಯ ಪದ್ಧತಿ ಎಂದರೇನು ಎಂಬುದನ್ನು ವಿಜಯವಾಡ ಮಹಾಧಿವೇಶನ ಸ್ಪಷ್ಟ ಮಾತುಗಳಲ್ಲಿ ಹೇಳಿದೆ.

ಅಧ್ಯಕ್ಷೀಯ ಪದ್ಧತಿಗೂ ಪಾರ್ಲಿಮೆಂಟರಿ ಪದ್ಧತಿಗೂ ಇರುವ ಮುಖ್ಯ ವ್ಯತ್ಯಾಸವೇನು ? ಈಗ ಪಾರ್ಲಿಮೆಂಟರಿ ಪದ್ಧತಿಯಲ್ಲಿ ಜನ ವಿಧಾನ ಸಭೆಯ ಸದಸ್ಯರನ್ನು ಲೋಕ ಸಭೆಯ ಸದಸ್ಯರನ್ನು ನೇರವಾಗಿ ಚುನಾಯಿಸುತ್ತಾರೆ. ಹೀಗೆ ರಚಿತವಾದ ವಿಧಾನ ಸಭೆ ರಾಜ್ಯದ ಆಡಳಿತವನ್ನೂ ಲೋಕ ಸಭೆ ದೇಶದ ವ್ಯವಹಾರಗಳಿಗೆ ಪೂರ್ಣ ಜವಾಬ್ದಾರಿ. ಈ ಸಭೆಯ ಸದಸ್ಯರೇ ಮುಖ್ಯ ಮಂತ್ರಿಯಾಗಬಹುದು ಮಂತ್ರಿಯಾಗಬೇಕಾದರೂ ಈ ಸದನಗಳ ಸದಸ್ಯರಾಗಿರಲೇಬೇಕು. ಇದರಿಂದ ಜನರಿಂದ ಆಯ್ಕೆಯಾದ ಪ್ರತಿನಿಧಿಗಳಿಗೆ ಮಂತ್ರಿಮಂಡಲ ನೇರವಾಗಿ ಜವಾಬ್ದಾರಿಯಾಗಿರುತ್ತದೆ. ಅವಿಶ್ವಾಸ ನಿರ್ಣಯ ಮಂಡಿಸಿ ಯಾವಾಗಲೂ ಯಾವುದೇ ಮಂತ್ರಿ ಮಂಡಲವನ್ನು ಕಿತ್ತೊಗೆಯಬಹುದು ಮತ್ತೊಂದು ಮಂತ್ರಿ ಮಂಡಲ ಅಧಿಕಾರಕ್ಕೆ ಬರಬಹುದು ಅಧ್ಯಕ್ಷಿಯ ಪದ್ಧತಿಯಲ್ಲಿ ವಿಧಾನ ಸಭೆಯ ಸದಸ್ಯರಲ್ಲದೆ ರಾಜ್ಯದ ಮುಖ್ಯರಾದ ರಾಜ್ಯಪಾಲರು, ರಾಷ್ಟ್ರಪತಿಗಳನ್ನೂ ನೇರವಾಗಿ ಚುನಾಯಿಸಬೇಕು. ಮುಖ್ಯಮಂತ್ರಿಗಳು, ಪ್ರಧಾನ ಮಂತ್ರಿಗಳಿಗೆ ಬದಲಾಗಿರಾಜ್ಯ ಪಾಲರು ರಾಷ್ಟ್ರಪತಿಗಳು ಎಲ್ಲ ಆಡಳಿತ, ಅಧಿಕಾರಗಳಿಗೆ ಜವಾಬ್ದಾರರಾಗಿರುತ್ತಾರೆ. ಇವರು ಇಡಿ ರಾಜ್ಯದ ಅಥವಾ ದೇಶದ ಯಾರನ್ನಾದರೂ ತಮ್ಮ ಸಹಾಯಕರನ್ನಾಗಿ ಮಂತ್ರಿಯನ್ನಾಗಿ ಆಯ್ಕೆಮಾಡಿಕೊಳ್ಳಬಹುದು. ಈ ಮಂತ್ರಿಗಳು ಸಹಾಯಕರು ಲೋಕಸಭೆಗೆ, ವಿಧಾನ ಸಭೆಗೆ ಹೊಣೆಗಾರರಾಗಿರುವುದಿಲ್ಲ. ಅಧ್ಯಕ್ಷರಿಗೆ ಮಾತ್ರಾ ಹೊಣೆಗಾರರಾಗಿರುತ್ತಾರೆ. ವಿಧಾನಸಭೆಯಲ್ಲಿ ಮುಖಾಮುಖಿಯಾಗಿ ಎದುರಿಸಲ್ಪಡುವ ಯಾವುದೇ ಅಂಕೆ ಶಂಕೆಯಿರುವುದಿಲ್ಲ. ಇರುವುದೆಲ್ಲ ಕೇವಲ ಟೀಕೆ ಹಾಗೂ ನಿರ್ಣಯಗಳನ್ನು ಪಾಸು ಮಾಡುವ ಅಧಿಕಾರ ಭಾರತದಲ್ಲಿ ಇನ್ನು ಉಳಿದಿರುವ ಪಾಳೆಯಗಾರಿ ಅವಶೇಷದ ಮೇಲೆ ಕೇವಲ 50-60 ಕುಟುಂಬಗಳು ಸಾವಿರಾರು ಕೋಟಿಯಷ್ಟು ಆಸ್ತಿ ಪಡೆದಿರುವಂತಹ ವ್ಯವಸ್ಥೆಯಲ್ಲಿ ಈಗಾಗಲೇ ಪಾರ್ಲಿಮೆಂಟರಿ ಪದ್ಧತಿಯಲ್ಲಿಯೇ, ಲೋಕಸಭೆಗೆ ಉತ್ತರ ಹೇಳಬೇಕಾದ ಹೊಣೆ ಇರುವಾಗಲೇ, ಲೋಕಸಭೆಯನ್ನು ಕಡೆಗಣಿಸುವ ವಿರೋಧಪಕ್ಷಗಳ ಅಭಿಪ್ರಾಯಕ್ಕೆ ಬೆಲೆಯಿಲ್ಲದಿರುವಾಗ, ಅಧಿಕಾರಶಾಹಿ ತುಂಬಿತುಳುಕುತ್ತಿರುವಾಗ ಇಂತಹ ಅಧ್ಯಕ್ಷನೆಂಬ ಒಬ್ಬನೇ ವ್ಯಕ್ತಿಗೆ ಜವಾಬ್ದಾರಿ ನೀಡುವ ವ್ಯವಸ್ಥೆ ಬಂದರೆ ಆಳುವ ಪಕ್ಷ ಮದಿಸಿದ ಸಲಗದಂತಾಗುತ್ತದೆ.

ಅಧ್ಯಕ್ಷನೂ ಜನರಿಂದ ಚುನಾಯಿತನಾಗಿರುವಾಗ ಲೋಕ ಸಭೆಗೂ ಅಧ್ಯಕ್ಷನಿಗೂ ಭಿನ್ನಾಭಿಪ್ರಾಯ ಬಂದರೆ ಲೋಕ ಸಭೆಯ ಅಭಿಪ್ರಾಯಕ್ಕೆ ಮಾತ್ರ ಏಕೆ ಬೆಲೆಯಿಡಬೇಕು? ನಾನು ಜನರಿಂದ ಚುನಾಯಿತನಾದುದರಿಂದ ನನ್ನ ಧೋರಣೆಗಳನ್ನೂ ಜನ ಒಪ್ಪಿದ್ದಾರೆಂದೇ ನನ್ನನ್ನು ಅಧಿಕಾರದಲ್ಲಿರಿಸಿದ್ದಾರೆ. ನಿಮ್ಮ ಅಭಿಪ್ರಾಯಕ್ಕೆ ಬೆಲೆ ನೀಡಬೇಕೆಂದೇನೂ ನನಗೆ ಕಡ್ಡಾಯವಿಲ್ಲ ಎನ್ನುತ್ತಾನೆ ಅಧ್ಯಕ್ಷ. ಇದನ್ನೇ ಅಧ್ಯಕ್ಷ ನೀಡಿರುವ "ವಿಟೋ" ಅಧಿಕಾರ ಅಂದರೆ ಲೋಕ ಸಭೆಯ ಮಾತಿಗೆ ವಿರುದ್ಧವಾಗಿ ನಡೆಯುವ ಅಧಿಕಾರ ಎನ್ನುವುದು. ಇದೇ ಮಾತು ರಾಜ್ಯಪಾಲರು, ವಿಧಾನಸಭೆಯ ಸಂಬಂಧಕ್ಕೂ ಅನ್ವಯಿಸುತ್ತದೆ. ಹೀಗೆ ಪರಸ್ಪರ ಸಂಘರ್ಷಕ್ಕೆ ಒಂದು ಸಭೆಯ ಅಧಿಕಾರದ ಬದಲು ಒಬ್ಬ ವ್ಯಕ್ತಿಯ ಅಧಿಕಾರಕ್ಕೆ ನಾಂದಿಯಾಗುತ್ತದೆ.

ಈಗಾಗಲೇ ನ್ಯಾಯಧೀಶರನ್ನು ಇಲ್ಲಿಂದಲ್ಲಿಗೆ ವರ್ಗಾಯಿಸಿ ಅವರಿಗೆ ಇತರ ಅನೇಕ ರೀತಿಯ ತೊಂದರೆ ನೀಡಿ ತಮ್ಮ ಅಧೀನಕ್ಕೆ ತೆಗೆದುಕೊಳ್ಳುವ ಪ್ರಯತ್ನ ನಡೆದಿರುವಾಗ ಪತ್ರಿಕಾ ರಂಗದ ಮೇಲೆ ಧಾಳಿ ದಬ್ಬಾಳಿಕೆ ಹಿಂದೆ ಯಥೇಚ್ಛವಾಗಿ ನಡೆದು ಮುಂದೆಯೂ ಮತ್ತೆ ಪುನರಾವರ್ತನೆಯಾಗುವ ಪರಿಸ್ಥಿತಿಯಿರುವಾಗ, ಎಸ್.ಎಸ್.ಎ.ಎಸ್ಮಾಗಳೆಂಬ ಶಕ್ತಿ ತಲೆಯ ಮೇಲೆ ತೂಗುತ್ತಿರುವಾಗ, ಡಿಸ್ಟರ್ಬ್‌ಡ್ ಏರಿಯಾ ಆಕ್ಟ್, ವಿಶೇಷ ನ್ಯಾಯಾಲಯಗಳ ಕಾನೂನು ಬಾಯಿತೆರೆದು ಕಾದು ಕುಳಿತಿರುವಾಗ ಇವೆಲ್ಲದರ ಮೇಲೆ ಮೊದಲೇ ಕುಣಿಯುವ ಕೋತಿಗೆ ಅಧಿಕಾರ ಹೆಂಡ ಕುಡಿಸಿದಂತೆ ಆಗುವುದರಲ್ಲಿ ಏನಾಶ್ಚರ್ಯ?. ●

'ಐಕ್ಯರಂಗ'ಕ್ಕೆ

ಚಂದಾದಾರರಾಗಿರಿ

ವಾರ್ಷಿಕ ಚಂದಾ 50 ರೂ.

ಅರ್ಧ ವಾರ್ಷಿಕ ಚಂದಾ 25 ರೂ.

ಸರ್ವಾಧಿಕಾರವೋ ಅಥವಾ....

ಭಾರತ ಉಪ ಖಂಡವೆಂದು ಕರೆಸಿಕೊಳ್ಳುವ ಈ ಭೂಭಾಗದಲ್ಲಿ, ಭಾರತವನ್ನುಳಿದು ಬೇರೆ ಎಲ್ಲಾ ದೇಶಗಳಲ್ಲಿ ಪ್ರಜಾಸತ್ತೆಯ ಪರಿಸ್ಥಿತಿ ಏನಾಗಿದೆ ಎಂಬುದಕ್ಕೆ ದಿನ ದಿನವೂ ಬರುತ್ತಿರುವ ವರದಿಗಳು ಡಂಗೂರ ಹೊಡೆಯುತ್ತಿವೆ. ಪಾಕಿಸ್ಥಾನ, ಬಂಗ್ಲಾದೇಶ, ಶ್ರೀಲಂಕಾ ಮೊದಲಾದ ಈ ಎಲ್ಲಾ ದೇಶಗಳೂ ಪಾರ್ಲಿಮೆಂಟರಿ ಪದ್ಧತಿಯಲ್ಲೇ ಆಡಳಿತ ನಡೆಸಲು ಆರಂಭಮಾಡಿ ಅಲ್ಲಿಯ ನಾಯಕರಿಗೆ ಬೇಕಾದಾಗ ಯಾರ ಹೇಳಿಕೆ ಕೇಳಿಕೆಯೂ ಇಲ್ಲದೆ ಜನ ಸಮುದಾಯದ ಅಭಿಪ್ರಾಯ ಸಂಗ್ರಹವೂ ಇಲ್ಲದೆ ಇದಕ್ಕಿದ್ದಂತೆ ಅಧ್ಯಕ್ಷೀಯ ಮಾದರಿ ಸರ್ಕಾರಗಳಾಗಿ ಪರಿವರ್ತಿತವಾದುವು. ಈ ಅಧ್ಯಕ್ಷೀಯ ಮಾದರಿ ಸರಕಾರಗಳನ್ನು ಈ ದೇಶಗಳ ಜನತೆ ಅನುಭವಿಸಬೇಕಾಗಿ ಬಂದಿದೆ.

ಮೂರನೇ ಜಗತ್ತಿನ ದೇಶಗಳಲ್ಲಿ ಅತ್ಯಂತ ತೀವ್ರದ ದಬ್ಬಾಳಿಕೆಯಲ್ಲಿ ನರಳುತ್ತಿರುವ ದೇಶಗಳು, ಮಿಲಿಟರಿ ಸರ್ವಾಧಿಕಾರಿಗಳು ಅಪ್ಪಿಕೊಂಡಿರುವುದು, ಅಧ್ಯಕ್ಷೀಯ ಪದ್ಧತಿಯನ್ನೇ.

ವಿಶ್ವ ಪ್ರಸಿದ್ಧ ಮಾರ್ಕೋಸ್ ಎಂಬ ಸರ್ವಾಧಿಕಾರಿ ತನ್ನ ದೇಶವಾದ ಫಿಲಿಫೈನ್ಸ್ ಅನ್ನು ಆಳುತ್ತಿದ್ದುದು ಈ ಅಧ್ಯಕ್ಷೀಯ ಪದ್ಧತಿಯಲ್ಲೇ ದ.ಕೊರಿಯಾ, ದ.ಆಫ್ರಿಕಾದ ಸರ್ವಾಧಿಕಾರಿ ಆಳುತ್ತಿದ್ದುದು ಅಧ್ಯಕ್ಷನೆಂದೇ.

ಆಳುವ ವರ್ಗ ಕೇವಲ ತನ್ನ ಲಾಭಕ್ಕಾಗಿ, ತಾನು ಕೊಬ್ಬಿ ಬೆಳೆಯುವುದಕ್ಕಾಗಿ ಇವರೆಲ್ಲರ ದುಡಿಮೆಯ ಫಲ ಪಡೆಯುವ ಬಗ್ಗೆ ಪ್ರಜ್ಞೆ ಬೆಳೆದಂತೆ ಪ್ರತಿಭಟನೆ ಬೆಳೆದಂತೆ ತನ್ನ ಅಧಿಕಾರವನ್ನು ಉಳಿಸಿಕೊಳ್ಳುವುದು ಚುನಾವಣೆಯ ಮೂಲಕ ಚುನಾಯಿತ ಪ್ರತಿನಿಧಿಗಳ ಮೂಲಕ ಸಾಧ್ಯವಿಲ್ಲ ಎಂದಾಗ ಮಾತ್ರವೇ ಅಧ್ಯಕ್ಷೀಯ ಪದ್ಧತಿ ಆರಂಭವಾಗಿರುವುದು ಅದರ ಜೊತೆ ಜೊತೆಯಲ್ಲಿಯೇ ದುಡಿಯುವ ವರ್ಗದ ಮೇಲಿನದಾಳಿಯೂ, ದಾಳಿಯೇಕೆ ಮರ್ದನ-ಇಂಡೋನೇಷ್ಯಾದಲ್ಲಿ ಅದರಂತೆ 5 ಲಕ್ಷಜನ ಕಮ್ಯೂನಿಸ್ಟರ ಅವರ ಅಭಿಮಾನಿಗಳ ಸಂಬಂಧಿಗಳ ಕೊಲೆ ಮಾಡಿದ್ದು ಒಂದು ದೊಡ್ಡ ಉದಾಹರಣೆ.

ನಮ್ಮ ದೇಶದಲ್ಲಿಯೇ ತುರ್ತುಪರಿಸ್ಥಿತಿ ಬಂದು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮುರಿದದ್ದು ಒಂದು ಕಡೆ ಅದಕ್ಕೆ ಮೂರು ವರ್ಷ ಮೊದಲೇ ಪ.ಬಂಗಾಲ, ಕೇರಳಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಮೇಲೆ ಧಾಳಿ ನಡೆದದ್ದು ಮತ್ತೊಂದು ಕಡೆ. ತುರ್ತು ಪರಿಸ್ಥಿತಿಯ ನಂತರ ಅಧಿಕಾರಕ್ಕೆ ಬಂದ ಜನತಾ ಪಕ್ಷ ನಮ್ಮ ದೇಶದ ಮೇಲೆ ಎರಗಿದ ಏಕಪಕ್ಷ ಸರ್ವಾಧಿಕಾರದ ಎಲ್ಲಾ ಅವಕಾಶಗಳನ್ನು ಪೂರ್ಣವಾಗಿ ನಾಶಮಾಡದೆ ಉಳಿಯಲು ಬಿಟ್ಟರು. ನಂತರ ತುರ್ತು ಪರಿಸ್ಥಿತಿಯನ್ನು ಹೇರಿದ ಮತ್ತೆ ಮತ್ತೆ ಅದನ್ನು ಸಮರ್ಥಿಸುವ ಸರಕಾರ ಮತ್ತೆ ಅಧಿಕಾರಕ್ಕೆ ಬಂತು. ಅಲ್ಲಿನಿಂದ ಇಲ್ಲಿಯವರೆಗೂ ಏಕ ಪಕ್ಷ ಸರ್ವಾಧಿಕಾರವನ್ನು ಹೇರ ಬಯಸುವ ಆಳುವ ಕಾಂಗ್ರೆ ಪಕ್ಷ ತನ್ನ ಈ ಸರ್ವಾಧಿಕಾರವನ್ನು ಬಲಪಡಿಸುವಅನೇಕ ಕಾನೂನುಗಳನ್ನೂ, ಧೋರಣೆಗಳನ್ನು ಪ್ರತಿಪಾದಿಸುತ್ತಲೇ ಬಂದಿದೆ. ಆದುದರಿಂದ ಈ ಈ ಎಲ್ಲಾ ಪ್ರಯತ್ನವನ್ನೂ, ಅಧ್ಯಕ್ಷೀಯ ಪದ್ಧತಿಯ ಚರ್ಚೆಯನ್ನು ಹಿಮ್ಮೆಟಿಸಬೇಕು. ●

ಅಮೇರಿಕನ್ ಸಮಾಜ - ಮಾದಕ ವಸ್ತುಗಳ ಅಧಿಪತ್ಯ

[2ನೇ ಪುಟದಿಂದ]

ಪದಾರ್ಥಗಳಿಗೆ ಯುವಕ ಯುವತಿಯರು ದಾಸರಾಗುತ್ತಿದ್ದಾರೆ. ಬರುವ ವರ್ಷಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಯುವತಿ ಯುವಕರು ಮಾದಕ ವಸ್ತುಗಳಿಗೆ ದಾಸರಾಗುತ್ತಿರುವುದನ್ನು ನೋಡುತ್ತಾ ಪೋಷಕರು ನಿಸ್ಸಾಹಯಕರಾಗಿ ಆತಂಕಪಡುತ್ತಿದ್ದಾರೆ ಇದು ಕೇವಲ ಆ ದೇಶದ ನಗರಗಳಿಗೆ ಸೀಮಿತವಾಗಿರದೆ ಇಡೀ ದೇಶಕ್ಕೆ ವ್ಯಾಪಿಸಿದೆ. ಕೋಕಾಯಿನ್ ಅನ್ನುವ ಮಾದಕ ಪದಾರ್ಥಕ್ಕೆ ಸಂಬಂಧಿಸಿದ "ಕ್ರಾಕ್" ಅನ್ನುವ ಮಾದಕ ವಸ್ತುವು 50 ಲಕ್ಷ ಜನರ ಮೇಲೆ ಚುರುಕಾಗಿ ಪ್ರಭಾವ ಬೀರುತ್ತಿದೆಯೆಂದು ತಿಳಿದು ಬಂದಿದೆ

ಕ್ಷೀಣಿಸುತ್ತಿರುವ ಆರ್ಥಿಕ ವ್ಯವಸ್ಥೆ ಎದುರಿಸುತ್ತಿರುವ ನಿರುದ್ಯೋಗಸಮಸ್ಯೆಯ ಪರಿಣಾಮದಿಂದಾಗಿ ಅಮೇರಿಕಾದ ಯುವಜನತೆ ಆಶಯ ಮತ್ತು ಆದರ್ಶಗಳನ್ನು ಮರೆತು ದುಶ್ಚಟಗಳಿಗೆ ಮತ್ತು ಅಪರಾಧಗಳಿಗೆ ಬಲಿಯಾಗುತ್ತಿರುವುದು ಅಧಿಕವಾಗುತ್ತಿದೆ.

ಅಪರಾದ ಪರಿಶೋಧಕ ಕಾದಂಬರಿಗಳು ಹಿಂಸೆ ಮತ್ತು ಕ್ರೌರ್ಯಗಳಿಂದ ಕೂಡಿದ ಚಲನ ಚಿತ್ರಗಳೇ ಇಂದಿನ ಯುವ ಜನಾಂಗದ ಕಾರ್ಯಕ್ರಮವಾಗಿದೆ. ಯುವಜನತೆ ಮತ್ತು ಪ್ರೇಕ್ಷಕರಲ್ಲಿರುವ ಬಲಹೀನತೆಯನ್ನು ಆಸರೆಯಾಗಿ ತೆಗೆದು ಕೊಂಡು ಚಲನ ಚಿತ್ರ ನಿರ್ಮಾಪಕರು"ನಾಜಿ" ರೀತಿಯ ಚಲನಚಿತ್ರಗಳನ್ನು ತೆಗೆಯುತ್ತಿದ್ದಾರೆ. ಸಾಮಾಜಿಕ ಅಭಿವೃದ್ಧಿ ಮತ್ತು ಪ್ರಜ್ಞೆ ಮೂಡಿಸುವ ಚಲನ ಚಿತ್ರಗಳು ಅತಿ ವಿರಳ. ಕಾಮ ಪ್ರಚೋದಕ, ಹಿಂಸೆ ಮತ್ತು ಕ್ರೌರ್ಯಗಳನ್ನೇ ಪ್ರದರ್ಶಿಸುವ ಚಲನ ಚಿತ್ರಗಳ ಮಿತಿ ಮೀರಿದೆ ಇತ್ತೀಚೆಗೆ ದೆವ್ವಗಳನ್ನು ಪ್ರದರ್ಶಿಸುವ ಚಲನ ಚಿತ್ರಗಳು ಬಾಕ್ಸಾಫೀಸಿನಲ್ಲಿ ಹಿಟ್ ಆಗುತ್ತಿವೆ. "ದಿ ಎಕ್ಸಾಸಿಸ್ಟ್" ರೀತಿಯ ಚಲನ ಚಿತ್ರಗಳ ಜಾಡೇ ನಿರ್ಮಾಣವಾಗಿದೆ. ಈ ಚಲನ ಚಿತ್ರಗಳಲ್ಲಿ ನಟನಾ ಮೌಲ್ಯಗಳಾಗಲಿ ಸಾಮಾಜಿಕ ಮೌಲ್ಯಗಳಾಗಲಿ ಕಾಣಿಸುವುದಿಲ್ಲ. ಅಪರಾಧಗಳನ್ನು ಪ್ರದರ್ಶಿಸುವ ಚಲನ ಚಿತ್ರಗಳಿಗೆ ಎಷ್ಟು ಬೇಡಿಕೆ ಬೆಳೆದಿದೆಯೆಂದರೆ "ಗಾಡ್ ಫಾದರ್, ರಾಂಬೋ, ದಿ ಪ್ರೊಟೆಕ್ಟರ್" ಎಂಬ ಚಲನ ಚಿತ್ರಗಳ ಸಾಲಿಗೆ ಇತ್ತೀಚಿನ "ಫಸ್ಟ್ ಬ್ಲಡ್" ಎಂಬ ಚಿತ್ರವೂ ಸೇರಿದಂತೆ ಈ ಚಿತ್ರಗಳಿಗಿರುವ ಬೇಡಿಕೆಯನ್ನು ಹಣ ದೋಚುವ ರೀತಿಯನ್ನು ಗಮನಿಸಿದರೆ ಆ ಸಮಾಜದ ಮೌಲ್ಯಗಳು ಯಾವ ದುರಂತವನ್ನು ತಲುಪಿದೆ ಎಂಬುದು ತಿಳಿದು ಬರುತ್ತದೆ.

ಹಸಿವಿನ ಬಾಧೆ ತೀರಿಸುವುದಕ್ಕಿಂತ ಶಸ್ತ್ರಾಸ್ತ್ರ ತಯಾರಿಕೆಯೇ ಮುಖ್ಯ ಎನ್ನುವ ಅಮೇರಿಕಾ ಇಂದು "ನಮಗೆ ಉದ್ಯೋಗ ಕೊಡಿ" ಎನ್ನುವ ಯುವ ಜನಾಂಗಕ್ಕೆ ಉತ್ತರ ಹೇಳಲಾರದಾಗಿದೆ. ಶಸ್ತ್ರಾಸ್ತ್ರಗಳ ಉತ್ಪತ್ತಿಗಾಗಿ ಮೀಸಲಾಗಿಟ್ಟಿರುವ ಹಣದಲ್ಲಿ ಕನಿಷ್ಟ ಶೇಕಡಾ 25 ರಷ್ಟನ್ನಾದರೂ ದೇಶದ ಪ್ರಗತಿಗಾಗಿ ವ್ಯಯಮಾಡಿದರೆ ಪ್ರಸ್ತುತ ಪರಿಸ್ಥಿತಿಯನ್ನು ಎದುರಿಸಬಹುದೆಂದು ಕೆಲವು ಸಮಾಜ ಶಾಸ್ತ್ರಜ್ಞರ ಅಭಿಪ್ರಾಯವಾಗಿದೆ.

ತಾರಸಮರದ ಜಪವನ್ನು ಪಠಿಸುತ್ತಾ ಇಡೀ ಜಗತ್ತನ್ನೇ ನಾಶ ಮಾಡಲು ಹೊರಟಿರುವ ರೇಗನ್ ಮತ್ತು ಅವನ ಚೇಲಾಗಳು ತಮ್ಮ ಸಮಾಜದ ದುರಂತವನ್ನು ಮತ್ತು ಅಧಃಪತನವನ್ನು ತಪ್ಪಿಸಲೆಂದು ವಿಶ್ವದ ಜನತೆ ಯಾಕೆ ಕೇಳಬಾರದು?

●

ಅಮೆರಿಕನ್ ಮಾದರಿ 'ಅಧ್ಯಕ್ಷೀಯತೆ'

[4ನೇ ಪುಟದಿಂದ]

ಗೊಳಿಸಲು "ವಿಕೇಂದ್ರೀಕರಣ"ದ ಮಾತುಗಳೂ ಕೇಳಬರುತ್ತಿವೆ. ಆದರೆ ಒಂದು ಕೇಂದ್ರೀಕೃತ ಸಾಮ್ರಾಜ್ಯಶಾಹೀ ಆರ್ಥಿಕ ವ್ಯವಸ್ಥೆಯಲ್ಲಿ ಇವು ಕೇವಲ ಸೋಗಿನ ಕಾರ್ಯಕ್ರಮಗಳಾಗಿವೆ. ಉದಾಹರಣೆಗೆ ರೇಗನ್‌ರ "ಹೊಸ ಒಕ್ಕೂಟವಾದ" ವನ್ನು ಅಲ್ಲಿನ ಪತ್ರಿಕೆಗಳು "ಹೊಸ ಪಾಳೆಯಗಾರಿಕೆ" ಎಂದು ಟೀಕಿಸಿವೆ.

ಅಮೆರಿಕಾದ್ದು "ಎರಡು ಪಕ್ಷಗಳ ಮಾದರಿ" ಎಂದು ಹೇಳಲಾಗುತ್ತಿದೆ. ಇದೆಷ್ಟು ನಿಜ? ವಾಸ್ತವವಾಗಿ ಈ ದೇಶದಲ್ಲಿ ಎಷ್ಟು ರಾಜಕೀಯ ಪಕ್ಷಗಳಿವೆ ಎಂದು ಹೇಳುವುದು ಕಷ್ಟ. ರಾಜಕೀಯ ಉದ್ದೇಶ ಹೊಂದಿರುವ ಎಲ್ಲಾ ಸಂಸ್ಥೆಗಳನ್ನು, ಸಂಘಟನೆಗಳನ್ನು ಲೆಕ್ಕ ಹಾಕಿದರೆ ಸಾವಿರಾರು ಆಗಬಹುದು. ಆದರೆ ಅಧ್ಯಕ್ಷೀಯ ಹಾಗೂ ಕಾಂಗ್ರೆಸ್ ಚುನಾವಣೆಗಳಲ್ಲಿ ಭಾಗವಹಿಸುವ ಪಕ್ಷಗಳ ಸಂಖ್ಯೆ ಸುಮಾರು ಮೂವತ್ತು. ದೇಶದಲ್ಲಿ ನಿಜವಾಗಿಯೂ ರಾಜಕೀಯ ಅಧಿಕಾರ ಆಕ್ರಮಿಸಬಲ್ಲ ಪಕ್ಷಗಳು ಕೇವಲ ಎರಡು–ರಿಪಬ್ಲಿಕನ್ ಹಾಗೂ ಡೆಮೊಕ್ರಾಟಿಕ್ ಪಕ್ಷಗಳು. ಆದರೆ ಇವುಗಳ ವರ್ಗಸ್ವಭಾವವನ್ನು ಪರಿಗಣನೆಗೆ ತಗೊಂಡರೆ ಅಮೆರಿಕಾದಲ್ಲಿ ಇರುವುದು ಕೇವಲ ಒಂದೇ ಪಕ್ಷ–ಅಮೆರಿಕನ್ ಬಂಡವಾಳಶಾಹಿಯ ಪಕ್ಷ. ಅಮೆರಿಕನ್ ಬಂಡವಾಳಶಾಹಿ ಮುಂದಿನ ನಾಲ್ಕು ವರ್ಷಗಳಲ್ಲಿ ಯಾರು ತನ್ನ ಹಿತಾಸಕ್ತಿಗಳನ್ನು ಚೆನ್ನಾಗಿ ಕಾಪಾಡಬಲ್ಲರು ಎಂದು ಭಾವಿಸುತ್ತದೋ ಆ ಪಕ್ಷವನ್ನು ಅಧಿಕಾರಕ್ಕೆ ತರುತ್ತದೆ. ಆದ್ದರಿಂದಲೇ ಚುನಾವಣೆಗಳಲ್ಲಿ ಸಿದ್ಧಾಂತಗಳಿಗಿಂತ ಹಣವೇ ಬಹಳ ಮಹತ್ವದ ಪಾತ್ರವಹಿಸುತ್ತಿದೆ. ವಾಟರ್‌ಗೇಟ್ ಹಗರಣದ ನಂತರ ನಿಕ್ಸನ್ ತನ್ನ ಅಧ್ಯಕ್ಷೀಯ ಚುನಾವಣೆಗೆ ಬಹುರಾಷ್ಟ್ರೀಯ ಕಂಪೆನಿಗಳಾದ ಗಲ್ಫ್ ಆಯಿಲ್‌ನಿಂದ 10 ಲಕ್ಷ ಡಾಲರ್ ಐ.ಟಿ.ಟಿ.ಯಿಂದ 5 ಲಕ್ಷ, ಟೆನ್ನೆಕೋದಿಂದ ಕೆಲವು ಲಕ್ಷ ಹೀಗೆ ಲಕ್ಷಾಂತರ ಡಾಲರುಗಳನ್ನು ಪಡೆದನೆಂಬುದು ಬಯಲಿಗೆ ಬಂತು. ಇದು ನಿಕ್ಸನ್‌ರ "ವಿಶೇಷತೆ" ಮಾತ್ರವೇ ಅಲ್ಲ. ಈಗ ಪ್ರತಿನಿಧಿಸಭೆಯ ಸದಸ್ಯತ್ವದ "ಬೆಲೆ" ಒಂದುವರೆ ಲಕ್ಷ ಡಾಲರ್, ಸೆನೆಟ್‌ ಸದಸ್ಯತ್ವಕ್ಕೆ 15 ಲಕ್ಷ ಡಾಲರ್ ಹಾಗೂ ಗವರ್ನರ್ ಸ್ಥಾನಪಡೆಯಲು ಒಟ್ಟು ಖರ್ಚು 25 ಲಕ್ಷ ಡಾಲರ್!

– ಕೆ. ವಿ.

●

ಕಂಟ್ರಾಕ್ಟ್ ಕೆಲಸಗಾರರ ವಿಜಯ

ಮಂಗಳೂರಿನ ಮರೋಳಿಯಲ್ಲಿರುವ ಕೆನರಾ ವರ್ಕ್‌ಶಾಪ್‌ನಲ್ಲಿ ವಿವಿಧ ಕಂಟ್ರಾಕ್ಟದಾರರ ಕೈಕೆಳಗೆ ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು ಕಂಪೆನಿಯ ಖಾಯಂ ಕೆಲಸಗಾರರನ್ನಾಗಿ ನೇಮಿಸಬೇಕೆಂದು ಸಿ. ಐ. ಟಿ. ಯು. ನೇತೃತ್ವದ ಮೋಟಾರ್ ಟ್ರಾನ್ಸ್‌ಪೋರ್ಟ್ ಅಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ ಕಳೆದ ಹಲವಾರು ಸಮಯದಿಂದ ಮೇನೇಜ್‌ಮೆಂಟ್ ಮುಂದೆ ಬೇಡಿಕೆಯನ್ನಿಟ್ಟು ಹೋರಾಟ ನಡೆಸಲಾಗುತ್ತಿತ್ತು. ಈ ಕೆಲಸಗಾರರು ಕಂಟ್ರಾಕ್ಟದಾರರಿಂದ ವಿವಿಧ ರೀತಿಯ ಶೋಷಣೆಗೆ ಒಳಗಾಗಿ ದುಡಿಯುತ್ತಿದ್ದರು.

ಈ ಬಗ್ಗೆ ಯೂನಿಯನ್ ಮತ್ತು ಮೇನೇಜ್‌ಮೆಂಟಿನ ನಡುವೆ ಹಲವು ಸುತ್ತುಗಳ ಮಾತುಕತೆ ನಡೆದು 1–12–86ರಿಂದ ಕಂಪನಿಯ ಒಪ್ಪಂದ ಏರ್ಪಟ್ಟಿತು. ಈ ಒಪ್ಪಂದದ ಪ್ರಕಾರ ಎಲ್ಲಾ ಕಂಟ್ರಾಕ್ಟ್ ಕೆಲಸಗಾರರನ್ನು 1-12-86ರಿಂದ ಕಂಪೆನಿಯ ಖಾಯಂ ಕೆಲಸಗಾರರೆಂದು ಪರಿಗಣಿಸಿ, ಅವರಿಗೆ ಉಳಿದ ಕೆಲಸಗಾರರಿಗೆ ಸಿಗುವ ಎಲ್ಲಾ ಸವಲತ್ತುಗಳನ್ನು ಜ್ಯಾರಿಗೊಳಿಸಲು ಮೇನೇಜ್‌ಮೆಂಟ್ ಒಪ್ಪಿದೆ. ಒಪ್ಪಂದಕ್ಕೆ ಯೂನಿಯನ್‌ನಿನ ಪರವಾಗಿ ಶ್ರೀ ಕೆ. ಮೂಸಬ್ಬ ಮತ್ತು ಪಿ. ಉಮೇಶ್ ಭಂಟಾರಿಯವರೂ, ಆಡಳಿತ ವರ್ಗದ ಪರವಾಗಿ ಮೇನೇಜಿಂಗ್ ಡೈರೆಕ್ಟರ್ ಶ್ರೀ ವಿ. ಎಸ್. ಕುಚ್ಚ, ಜನರಲ್ ಮೇನೇಜರ್ ಶ್ರೀ ವಿಶ್ವನಾಥನ್ ಮತ್ತು ಶ್ರೀ ಅರವಿಂದ ಉಪಾಧ್ಯ, ಶ್ರೀ ಹರಿರಾಮ್ ಶೆಣೈ ಹಾಗೂ ರವಿಚಂದ್ರ ಸಹಿ ಹಾಕಿದ್ದಾರೆ.

○

ಸಾರ್ವಜನಿಕ ಕ್ಷೇತ್ರದ ಮುಷ್ಕರ

ಕೆ.ಜಿ.ಎಫ್. ಕೇಂದ್ರ ಸರ್ಕಾರದ ಸಾರ್ವಜನಿಕ ಕ್ಷೇತ್ರಗಳ ಖಾಸಗೀಕರಣದ ನೀತಿಯ ವಿರುದ್ಧ ಕೇಂದ್ರ ಕಾರ್ಮಿಕ ಸಂಘಟನೆಗಳು ಜನವರಿ 21 ರಂದು ಸಾರ್ವಜನಿಕ ಕ್ಷೇತ್ರಗಳ ಕಾರ್ಮಿಕರು ಅಖಿಲ ಭಾರತ ಮುಷ್ಕರ ನಡೆಸಬೇಕೆಂದು ನೀಡಿದ ಕರೆಯನುಸಾರ ಕೆ.ಜಿ.ಎಫ್.ನ ಭಾರತ್ ಗೋಲ್ಡ್ ಮೈನ್ಸ್, ಮೈಸೂರು ಮೈನ್ಸ್, ಚಾಂಪಿಯನ್ ರೀಫ್‌ಗಳಲ್ಲಿ ಸಂಪೂರ್ಣ ಮುಷ್ಕರ ನಡೆಯಿತು. ಆದರೆ ನಂದಿದುರ್ಗ ಮೈನ್ಸ್‌ನ ಕೆನಡೀಸ್ ಶಾಫ್ಟ್‌ನಲ್ಲಿ ಐ.ಎನ್.ಟಿ.ಯು.ಸಿ. ಮತ್ತು ಎ.ಐ.ಡಿ.ಎಂ.ಕೆ.ಗೆ ಸೇರಿದ ಗೂಂಡಾಗಳು ಸಿ.ಐ.ಟಿ.ಯು. ಕಾರ್ಯಕರ್ತರ ಮೇಲೆ ಧಾಳಿ ನಡೆಸಿ ಮುಷ್ಕರವನ್ನು ಮುರಿಯಲು ಪ್ರಯತ್ನಿಸಿದರು. ಈ ಗೂಂಡಾಗಳು ಮುಷ್ಕರವನ್ನು ಮುರಿಯಲು ಕರಪತ್ರಗಳನ್ನು ಹಂಚಿ ಭೀತಿಯ ವಾತಾವರಣ ನಿರ್ಮಿಸಿದ್ದರು. ಆದರೆ ಕಾರ್ಮಿಕರು ಸಿ.ಐ.ಟಿ.ಯು. ಗೆ ಸಂಪೂರ್ಣ ಬೆಂಬಲ ನೀಡಿ ಮುಷ್ಕರವನ್ನು ಯಶಸ್ವಿಗೊಳಿಸಿದರು.

ಬಿ.ಇ.ಎಂ.ಎಲ್. ನಲ್ಲೂ ಸಹ ಮುಷ್ಕರ ಸಂಪೂರ್ಣ ಯಶಸ್ವಿಯಾಗಿ ನಡೆಯಿತು.

ಗುಲ್ಬರ್ಗಾ

ಜನವರಿ 21ರಂದು ಗುಲ್ಬರ್ಗಾದ ಎಂ.ಎಸ್.ಕೆ. ಮಿಲ್‌ನಲ್ಲಿ ಸಂಪೂರ್ಣ ಮುಷ್ಕರ ನಡೆಯಿತು. ಕೇಂದ್ರ ಕಾರ್ಮಿಕ ಸಂಘಟನೆಗಳ ಕರೆಗೆ ಒಗೊಟ್ಟು ಎಂ.ಎಸ್.ಕೆ.ಮಿಲ್‌ನ ಕಾರ್ಮಿಕ ಸಂಘಗಳು ಮುಷ್ಕರವನ್ನು ಯಶಸ್ವಿಗೊಳಿಸಿದವು. ನಂತರ ನಡೆದ ಬಹಿರಂಗ ಸಭೆಯಲ್ಲಿ ಸಿ.ಐ.ಟಿ.ಯು. ಹೆಚ್.ಎಂ.ಎಸ್. ಕೆ.ಎಸ್.ಆರ್.ಟಿ.ಸಿ. ಬ್ಯಾಂಕ್ ನೌಕರರ ಎಲ್.ಐ.ಸಿ. ನೌಕರರ ಮುಖಂಡರುಗಳು ಮಾತನಾಡಿ ರಾಜೀವ್‌ಗಾಂಧಿಯವರ ಜನ ವಿರೋಧಿ ನೀತಿಗಳನ್ನು ಖಂಡಿಸಿದರು.

○

ಫ್ರಾನ್ಸ್ ರೈಲ್ವೆ ನೌಕರರ ಹೋರಾಟಕ್ಕೆ ಸಿಐಟಿಯು ಬೆಂಬಲ

ಡಿಸೆಂಬರ್ 18 ರಿಂದ ಮುಷ್ಕರ ಹೂಡಿರುವ ಫ್ರಾನ್ಸ್‌ನ ರೈಲ್ವೆ ನೌಕರರಿಗೆ ಸಿ.ಐ.ಟಿ.ಯು ತನ್ನ ಶುಭಾಶಯಗಳನ್ನು ಅರ್ಪಿಸಿದೆ.

ತಮ್ಮ ಜೀವನ ಮಟ್ಟದ ಸುಧಾರಣೆಗಾಗಿ, ತಮ್ಮ ಉದ್ಯೋಗದ ರಕ್ಷಣೆಗಾಗಿ ಈ ಹೋರಾಟ ಅತ್ಯಗತ್ಯ ಎಂದು ಸಿಐಟಿಯು ಭಾವಿಸಿದೆ. ಫ್ರಾನ್ಸ್‌ನಲ್ಲಿ ಜನವರಿ 6 ರಂದು ಇಡೀ ರಾಷ್ಟ್ರದಾದ್ಯಂತ ಮುಷ್ಕರ ಹಾಗೂ ಮೆರವಣಿಗೆಗಳನ್ನು ನಡೆಸಲಾಯಿತು. ಎಲ್ಲಾ ಬಂಡವಾಳಶಾಹಿ ದೇಶಗಳ ಭೂಮಾಲಿಕರು ದುಡಿಯುವ ವರ್ಗದ ಹೆಗಲಿನ ಮೇಲೆ ತಮ್ಮೆಲ್ಲಾ ಹೊರೆಯನ್ನು ಹೇರಲು ಪ್ರಯತ್ನಿಸುತ್ತಿರುವುದನ್ನು ಖಂಡಿಸುತ್ತದೆಯಲ್ಲದೆ, ಫ್ರಾನ್ಸ್ ಕಾರ್ಮಿಕರ ಹೋರಾಟಕ್ಕೆ ತಮ್ಮ ತುಂಬು ಹೃದಯದ ಶುಭಾಶಯಗಳನ್ನು ಅರ್ಪಿಸಿದೆ.

○

ಉ. ಕನ್ನಡ ಜಿಲ್ಲಾ ಎಸ್. ಎಫ್. ಐ. ಸಮಾವೇಶ

ಎಸ್. ಎಫ್. ಐ. ನ ಉತ್ತರ ಕನ್ನಡ ಜಿಲ್ಲಾ ಮಟ್ಟದ ಸಮಾವೇಶವು ಶಿರಸಿಯಲ್ಲಿ ಡಿಸೆಂಬರ್ 1 ಮತ್ತು 2 ರಂದು ಯಶಸ್ವಿಯಾಗಿ ನಡೆಯಿತು. ಉತ್ತರ ಕನ್ನಡ ಜಿಲ್ಲಾ ಜನತಾ ಪಕ್ಷದ ಅಧ್ಯಕ್ಷರಾದ ಶ್ರೀ ಆರ್. ಜಿ. ಭಟ್ಟರವರು ಸಮಾವೇಶವನ್ನು ಉದ್ಘಾಟಿಸಿದರು. ದಾಂಡೇಲಿ ಪುರಸಭಾ ಅಧ್ಯಕ್ಷರಾದ ಟಿ. ಎಸ್. ನಾಯಕ್ ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಎಸ್. ಎಫ್. ಐ. ರಾಜ್ಯ ಅಧ್ಯಕ್ಷರಾದ ಆರ್. ಜಯಕುಮಾರ್‌ರವರು ಸಮಾವೇಶವನ್ನುದ್ದೇಶಿಸಿ ಮಾತನಾಡುತ್ತಾ – ವ್ಯಾಪಾರೀಕರಣಗೊಂಡಿರುವ ಶಿಕ್ಷಣ ಪದ್ಧತಿಯ ಬದಲಾವಣೆಗಾಗಿ ಹೋರಾಡಲು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಜನ ವಿರೋಧಿಯಾದಂತಹ ಕೇಂದ್ರ ಸರಕಾರದ ಹೊಸ ಶಿಕ್ಷಣ ನೀತಿಯನ್ನು ತೀವ್ರವಾಗಿ ಖಂಡಿಸಿದ ಅವರು ಜನತಾ ಸರಕಾರ ಕ್ಯಾಪಿಟೇಶನ್ ಫೀ ವಸೂಲಾತಿ ಕ್ರಮವನ್ನು ರದ್ದುಪಡಿಸದಿರುವ ನೀತಿಯನ್ನು ಟೀಕಿಸಿದರು.

ಉ. ಕ. ಜಿಲ್ಲೆಯಲ್ಲಿ ಉತ್ತಮ ಹಾಸ್ಟೆಲ್ ಸೌಲಭ್ಯವನ್ನು ಒದಗಿಸಲು ಒತ್ತಾಯಿಸುವ, ಅಂಚೆದರ ಏರಿಕೆಯನ್ನು ವಿರೋಧಿಸುವ, ಮೊದಲಾದ ನಿರ್ಣಯಗಳನ್ನು ಸಮಾವೇಶವು ಅಂಗೀಕರಿಸಿತು.

ಜಿಲ್ಲೆಯ ವಿವಿಧ ಭಾಗಗಳಿಂದ ವಿದ್ಯಾರ್ಥಿ ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದರು. ಸಮಾವೇಶದ ಅಂಗವಾಗಿ 'ರಂಗ ಸಂಗ' ತಂಡದವರಿಂದ 'ಕತ್ತೆ ಮತ್ತು ಧರ್ಮ' ನಾಟಕವನ್ನು ಪ್ರದರ್ಶಿಸಲಾಯಿತು.

ಅಧ್ಯಕ್ಷರಾಗಿ ಸುರೇಶ್ ಎಂ. ತಾಂಡೇಲ್, ಉಪಾಧ್ಯಕ್ಷರುಗಳಾಗಿ ನಜೀರ್ ಅಹಮ್ಮದ್, ವಿ. ಎಂ. ಹೆಗಡೆ, ಕಾರ್ಯದರ್ಶಿಯಾಗಿ ಶಾಂತಾರಾಮ ಎಸ್. ನಾಯಕ್, ಸಹಕಾರ್ಯದರ್ಶಿಗಳಾಗಿ ಜಿ. ಎಂ. ನಾಯಕ, ಅಶೋಕ ಭಂಡಾರಿ ಮತ್ತು ಖಜಾಂಚಿಯಾಗಿ ರಾಜು ಉಗ್ರಾಣಕರ್ ರವರುಗಳು ಆಯ್ಕೆಯಾದರು.

●

ಶಾಲೆಯ ಕೋಣೆಯಲ್ಲಿ ಬಾಂಬಿನ ಪಾಠ

ನಿಕರಾಗುವಾದ ಶಾಲೆಗಳ ಗೋಡೆಯೊಳಗೆ ಈಗ ಹೆಚ್ಚು ಹುಡುಗರೇನೂ ಇರುವುದಿಲ್ಲ. ಅಂದ ಮಾತ್ರಕ್ಕೆ ಶಾಲೆಗೆ ಚಕ್ಕರ್ ಹಾಕುವವರು ಹೆಚ್ಚಾಗಿದ್ದಾರೆ ಎಂದು ಅರ್ಥವಲ್ಲ. ಹೆಚ್ಚಾಗಿ ನಿಕರಾಗುವ ಶಾಲೆಗಳ ಎಲ್ಲಾ ವಿದ್ಯಾರ್ಥಿಗಳು ಈಗ ನಾಲ್ಕು ಗೋಡೆಗಳ ಮಧ್ಯದಿಂದ ಬಟಾಬಯಲಿಗೆ ವರ್ಗಾಯಿಸಲ್ಪಟ್ಟಿದ್ದಾರೆ. ನಮ್ಮ ಶಾಲೆಗಳಲ್ಲಿ ತಪ್ಪು ಮಾಡಿದವನಿಗಷ್ಟೇ ಬಯಲ ಬಿಸಿಲ ಝಳದಲ್ಲಿ ಬೇಯುವ ಕೆಲಸ. ಆದರೆ ಇಲ್ಲಿ, ನಿಕರಾಗುವಾದಲ್ಲಿ ಹಾಗಲ್ಲ, ಎಲ್ಲಾ ವಿದ್ಯಾರ್ಥಿಗಳೂ ತಾವೇ ಬಂದು ಬಯಲಲ್ಲಿ ನಿಂತಿದ್ದಾರೆ.

ಶಾಲೆಯ ನಾಲ್ಕು ಗೋಡೆಗಳ ಮಧ್ಯೆ ವರ್ಣಮಾಲೆ, ಎ,ಬಿ,ಸಿ,ಡಿ, ಕಲಿಯುವುದಕ್ಕಿಂತ ಹೆಚ್ಚಾಗಿ ಬಯಲಲ್ಲಿ ನಿಂತು ಅಂತರಿಕ್ಷ ನೋಡುವುದು ಹೆಚ್ಚು ಅರ್ಥಪೂರ್ಣವೆನಿಸಿದೆ. ಅಂತರಿಕ್ಷ ಎಂದರೆ ನಮ್ಮ ಕವಿಗಳ ಕನಸಾದ ಚಂದ್ರ, ಇಂದ್ರ, ಸಖಿ, ತಾರೆ ಇವುಗಳನ್ನು ಅಲ್ಲಿ ಕಲಿಸಲಾಗುವುದಿಲ್ಲ. ಅದರ ಬದಲು ನಿಕರಾಗುವಾದಲ್ಲಿ ಬಾಂಬು ಬೀಳುವ ಬಗೆ ಹೇಗೆ! ಎಲ್ಲಿಂದ, ಹೇಗೆ ಸ್ಫೋಟವಾಗುತ್ತದೆ. ಸ್ಫೋಟವಾಗಲು ಎಷ್ಟು ಸಮಯ ಬೇಕು. ಸ್ಫೋಟವಾದರೆ ಉಂಟಾಗುವ ದುರಾಂತಗಳೇನು? ನಾವು ಬದುಕಿ ಉಳಿಯಲು ಓಡುವ ಬಗೆ ಹೇಗೆ? ಬೇರೆಯವರನ್ನು ಬದುಕಿ ಉಳಿಸುವುದು ಹೇಗೆ ಎಂಬ ರಕ್ಷಣಾತಂತ್ರಗನ್ನು ಹೇಳಿಕೊಡಲಾಗುತ್ತಿದೆ.

ನಿಕರಾಗುವಾ ಇಂದು ಕಾದ ಕುಂಡ, ಯಾವ ಸಮಯದಲ್ಲಿ ಹೇಗೆ ಎಲ್ಲಿಂದ ಕಾಂಟ್ರಾಗಳು ಧಾಳಿ ಮಾಡುತ್ತಾರೆ ಎಂದು ಹೇಳಲಾಗದು. ಆದ್ದರಿಂದಲೇ ಈ ನಾಗರಿಕ ರಕ್ಷಣೆಯ ಪಾಠವನ್ನು ಶಾಲೆಯ ಸಿಲಬಸ್‌ನಲ್ಲಿ ಸೇರಿಸಲಾಗಿದೆ. ಇಲ್ಲಿ ಎಲ್ಲಾ ಮಕ್ಕಳು ನರ್ಸರಿಯಿಂದ ವಿಶ್ವವಿದ್ಯಾಲಯದವರೆಗೆ ಯುದ್ಧವನ್ನು ತಡೆಯುವ ಬಗ್ಗೆ, ಯುದ್ಧದಿಂದ ಪಾರಾಗುವ ಬಗ್ಗೆ ಪಾಠ ಕಲಿಯುತ್ತಾರೆ.

ಕಾಂಟ್ರಾಗಳಿಗೆ ಅಮೇರಿಕಾ 100 ಮಿಲಿಯನ್ ಡಾಲರ್ ಧನ ಸಹಾಯ ಮಾಡಿದ್ದರ ಹಿನ್ನೆಲೆಯಲ್ಲಿ ಈ ಪಾಠಗಳ ತೀವ್ರತೆ ಇನ್ನೂ ಹೆಚ್ಚಾಗಿದೆ. ಈ ಧನ ಸಹಾಯದ ಕುಮ್ಮಕ್ಕಿನಿಂದ ಕಾಂಟ್ರಾಗಳು ಯಾವ ಸಮಯದಲ್ಲಿ ಬೇಕಾದರೂ ನಿಕರಾಗುವಾದ ಮೇಲೆ ಧಾಳಿ ನಡೆಸುವುದರ ಸಾಧ್ಯತೆ ಇರುವುದರಿಂದ ಈ ಎಲ್ಲಾ ಮುನ್ನೆಚ್ಚರಿಕೆ ಕ್ರಮ. 'ನಾವು ಈ ವಿಶೇಷ ಸಿಲಬಸ್‌ನಿಂದ ತುಂಬಾ ಕಲಿತಿದ್ದೇವೆ ಕಾಂಟ್ರಾಗಳ ಧಾಳಿಯಾದಾಗ ನಮ್ಮನ್ನು ಉಳಿಸಿಕೊಳ್ಳುವ ವಿಶ್ವಾಸ ನಮಗೆ ಬಂದಿದೆ' ಎನ್ನುತ್ತಾನೆ ನಾಲ್ಕನೇ ತರಗತಿಯಲ್ಲಿ ಓದುತ್ತಿರುವ ಹತ್ತು ವರ್ಷದ ಜಿಮೇನಾ ರಿವೇರಾ 'ನಮ್ಮ ಹಳ್ಳಿಯ ಪಕ್ಕದಲ್ಲಿ ಎಣ್ಣೆಯ ಗಣಿಯಿದೆ. ಕಾಂಟ್ರಾಗಳ ಕಣ್ಣು ಅದರ ಮೇಲೆ ಸದಾ ಬಿದ್ದಿರುವುದರಿಂದ ನಾವು ನಮ್ಮನ್ನು ರಕ್ಷಿಸಿಕೊಳ್ಳಲು ಮತ್ತು ಆ ಎಣ್ಣೆಯ ಗಣಿಯನ್ನು ರಕ್ಷಿಸಲು ಈ ಸಿಲಬಸ್‌ನತ್ತ ಮಾರು ಹೋಗಿದ್ದೇವೆ' ಎನ್ನುತ್ತಾಳೆ 18 ವರ್ಷದ ಮೊರ್ಸೈರಾ.

ಸ್ಕಾಂಡಿನೆಸ್ಸಾ ರಂಗ ಎಲ್ಲಾ ಶಾಲೆಗಳಿಗೂ ನೀಡಿರುವ ಈ ಸಿಲಬಸ್‌ನಲ್ಲಿ ರಕ್ಷಣಾ ಬೇಲಿ ಸಿದ್ಧಪಡಿಸುವಿಕೆ, ಮನೆಗಳಿಲ್ಲದ ಪ್ರದೇಶಗಳಿಗೆ ಓಡಿಹೋಗುವುದು ಹೀಗೆ ಹಲವು ತಂತ್ರಗಳನ್ನು ಸಿದ್ಧಪಡಿಸಿದೆ. ಇಲ್ಲಿನ ಅಧ್ಯಾಪಕರಿಗೆ ನೀಡಿರುವ ಸೂಚನಾ ಪಟ್ಟಿಯಲ್ಲಿ ಬಾಂಬ್ ದಾಳಿಯ ಚಿತ್ರವಿದೆ. ನಿಕರಾಗುವಾದ ಮುಖ್ಯ ಶತ್ರು ಅಮೇರಿಕಾ ಮತ್ತು ಅದರ ಮಿತ್ರ ರಾಷ್ಟ್ರಗಳು, ಕಾಂಟ್ರಾಗಳಿಗೆ ನೀಡಿದ ಹಣ ಇವುಗಳ ಬಗ್ಗೆಯಲ್ಲಾ ಈ ತರಗತಿಯಲ್ಲಿ ಹೆಚ್ಚು ವ್ಯಾಪಕವಾಗಿ ಚರ್ಚೆ ನಡೆಯುತ್ತದೆ.

"ರೇಗನ್ ಅಜ್ಞಾನಿ"

ಅಮೇರಿಕಾದ ಅಧ್ಯಕ್ಷರಲ್ಲೇ ಅತ್ಯಂತ ಅಜ್ಞಾನಿ ಯಾರು? ಉತ್ತರ - ರೇಗನ್, ಇದು ಲಿಬಿಯಾದ ಗಡಾಫಿ ಉವಾಚ ಅಲ್ಲ. ಹೀಗೆನ್ನುವವರು ಅಮೇರಿಕಾದ ಹೌಸ್ ಆಫ್ ರೆಪ್ರೆಸೆಂಟಿಟಿವ್‌ನ ಸ್ಪೀಕರ್ ಥಾಮಸ್ ಓನಿಲ್. ನನಗೆ ಪರಿಚಯವಿದ್ದ ಎಂಟು ಅಧ್ಯಕ್ಷರಲ್ಲಿ ಅಥವಾ ಶ್ವೇತ ಭವನದಲ್ಲಿದ್ದ ಯಾವುದೇ ಅಧ್ಯಕ್ಷರ ಪೈಕಿ ಇವರಷ್ಟು ಅಜ್ಞಾನಿ ಇನ್ನೊಬ್ಬರಿಲ್ಲ ಎಂದು ಅವರು ಟಿ. ವಿ. ಸಂದರ್ಶನದಲ್ಲಿ ಹೇಳಿದ್ದಾರೆ

(ಕೃಪೆ : ಸುಧಾ)

ಪ್ಯಾಲಸ್ತೀನಿಯರು

ಅಮೇರಿಕಾ ಮತ್ತು ಇಸ್ರೇಲ್‌ನ ಆಜ್ಞೆಗೆ ತಕ್ಕಂತೆ ಕುಣಿಯುತ್ತಿರುವ ಅಮಲ್ ಗುಂಪು ಲೆಬನಾನ್‌ನಲ್ಲಿ ಪ್ಯಾಲಸ್ತೀನಿಯರ ವಿರುದ್ಧ ತನ್ನ ದಾಳಿಯನ್ನು ಸತತವಾಗಿ ಮುಂದುವರಿಸಿಯೇ ಇದೆ. ಪ್ಯಾಲಸ್ತೀನಿಯರ ಪಡೆಗಳನ್ನು ನಾಶ ಮಾಡುವತ್ತ ಮುಂದಾಗಿರುವ ಅಮಲ್ ಗುಂಪಿನ ದಾಳಿಯಲ್ಲಿ ನೂರಾರು ಜನರು ಸತ್ತಿದ್ದಾರಲ್ಲದೆ ಪ್ಯಾಲಸ್ತೀನ್ ಜನರು ಅನ್ನ, ನೀರು ಮತ್ತು ಸರಿಯಾದ ಔಷದವಿಲ್ಲದೆ ನರಳುತ್ತಿದ್ದಾರೆ.

ನವೆಂಬರ್ 27 ರಂದು ಸಭೆ ಸೇರಿದ ಪಾಪ್ಯುಲರ್ ಫ್ರಂಟ್ ಮತ್ತು ಡೆಮಾಕ್ರೆಟಿಕ್ ಫ್ರಂಟ್‌ಗಳು ಸಭೆ ಸೇರಿ ಈ ದಾಳಿಯನ್ನು ಖಂಡಿಸಿದ್ದಲ್ಲದೆ ಇಡೀ ವಿಶ್ವ ಸಮುದಾಯಕ್ಕೆ ಈ ದಾರುಣ ದಾಳಿಯ ವಿರುದ್ಧ ಸೊಲ್ಲೆತ್ತಲು ಕರೆ ನೀಡಿದವು.

"ಘಾನಾ ಬಿಕರಿಗಿಲ್ಲ"

ಸಾರ್ವಜನಿಕ ಸೇವೆಗಳಲ್ಲಿ ಎರಡು ವಿಧ-ಒಂದು, ಶ್ರೀಮಂತರನ್ನು ರಕ್ಷಿಸಿ ಮಾನವ ಹಾಗೂ ರಾಷ್ಟ್ರೀಯ ಸಂಪನ್ಮೂಲಗಳ ಖಾಸಗೀ ಶೋಷಣೆಗೆ ಅವಕಾಶ ಮಾಡಿಕೊಡುವಂತಹುದು ಹಾಗೂ ಎರಡು ಈ ಸಂಪನ್ಮೂಲಗಳನ್ನು ಬಂಡವಾಳದ ಅಭಿವೃದ್ಧಿಗೆ ಸಾರ್ವಜನಿಕ ನಿಧಿಯಾಗಿ ಬಳಸಿ ರಾಷ್ಟ್ರೀಯ ಅಭಿವೃದ್ಧಿಯನ್ನು ಪೋಷಿಸುವಂತಹುದು. ನಾವು ಕಟ್ಟಬೇಕಾದುದು ಎರಡನೇ ವಿಧದ ಉದ್ದಿಮೆಗಳನ್ನು. ಹೀಗೆಂದವರು ಘಾನಾದ ಸಾರ್ವಜನಿಕ ಸೇವೆಗಳ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಒಪಾರೆ-ಅಬಬಿವ್.

ಘಾನಾದ ಕಾರ್ಮಿಕಕೇಂದ್ರ ಟಿ.ಯು ಸಿ. (ಘಾನಾ) ದ 19 ಅಂಗ ಸಂಘಗಳಲ್ಲಿ ಒಂದಾದ 65000 ಸದಸ್ಯ ಸಂಖ್ಯೆಯುಳ್ಳ ಈ ಸಂಘದ ಜನವರಿ 5ರಿಂದ 8ರವರೆಗೆ ಜರುಗಿದ ಎರಡನೇ ಸಮ್ಮೇಳನ ಘಾನಾದ ಟ್ರೇಡ್ ಯೂನಿಯನ್ ಆಂದೋಲನದಲ್ಲಿ ಒಂದು ಮಹತ್ವದ ಘಟನೆ.

ಈ ಪಶ್ಚಿಮ ಆಫ್ರಿಕಾದ ದೇಶವನ್ನು ಅಸ್ಥಿರಗೊಳಿಸಲು ಸತತ ಯತ್ನ ನಡೆಸುತ್ತಿದ್ದ ಆಂಗ್ಲೋ- ಅಮೇರಿಕನ್ ಸಾಮ್ರಾಜ್ಯಶಾಹಿಗಳು 1966 ರಲ್ಲಿ ಸಿ.ಐ.ಎ.ನ ಪಿತೂರಿಯ ಮೂಲಕ ಎನ್‌ಕ್ರೂಮಾ ಪದಚ್ಯುತಿ ನಡೆಸುವಲ್ಲಿ ಯಶಸ್ವಿಯಾದರು. ಅನಂತರ ಸಿ.ಐ.ಎ.ನ ಆದೇಶದಂತೆ ಒಂದಾದ ಮೇಲೊಂದರಂತೆ ಮಿಲಿಟರಿ ಕ್ಷಿಪ್ರಕ್ರಾಂತಿಗಳು ನಡೆದವು. ಈಗ ಅಧಿಕಾರದಲ್ಲಿರುವ ಫ್ಲೈಟ್ ಲೆಫ್ಟಿನೆಂಟ್ ರಾಲಿಂಗ್ಸ್‌ನ್ ಸರ್ಕಾರ ರಾಜಕೀಯ ಪಕ್ಷಗಳನ್ನು ನಿಷೇಧಿಸಿದರೂ ಕಾರ್ಮಿಕರ ಸಂಘಗಳು ಹಾಗೂ ಇತರ ಸಾಮಾಜಿಕ ಸಂಘಟನೆಗಳಿಗೆ ಅವಕಾಶ ನೀಡಿ ಇತ್ತೀಚಿನವರೆಗೆ ಸ್ವತಂತ್ರ, ಅಲಿಪ್ತ ನಿಲುವು ತಳೆದಿದ್ದರೂ ಈಗ ಜಾಗತಿಕ ಬ್ಯಾಂಕ್, ಐ.ಎಂ.ಎಫ್. ಒತ್ತಡಗಳಿಗೆ ಬಲಿಯಾಗಿ ಸಾಮ್ರಾಜ್ಯಶಾಹಿಗಳತ್ತ ವಾಲಲಾರಂಭಿಸಿದೆ.

ಈ ಹಿನ್ನೆಲೆಯಲ್ಲಿ ನಡೆದ ಸಮ್ಮೇಳನ ಸರಕಾರದ ಈ ವಾಲುವಿಕೆಯನ್ನು ಖಂಡಿಸಿತು. "ಘಾನಾ ಬಿಕರಿಗಿಲ್ಲ. ಆದ್ದರಿಂದ ನಮ್ಮ ರಾಷ್ಟ್ರೀಯ ಹಾಗೂ ಪ್ರಾಕೃತಿಕ ಸಂಪನ್ಮೂಲಗಳು ಘಾನಾ ಜನರ ರಾಷ್ಟ್ರೀಯ ಪುನರ್ವಸತಿಗಾಗಿ, ದೇಶದ ಬಂಡವಾಳದ ಬೆಳವಣಿಗೆಯ ಮೂಲವಾಗಿ ಬಳಕೆಯಾಗಬೇಕು. ಪಾಶ್ಚಿಮಾತ್ಯ ದೇಶಗಳ ಒತ್ತಡಕ್ಕೆ ಮಣಿದು ನಡೆಸುವ ಯಾವುದೇ ರೂಪದ ಖಾಸಗೀಕರಣ ಇದಕ್ಕೆ ನೆರವಾಗುವುದಿಲ್ಲ" ಎಂದಿರುವ ಸಮ್ಮೇಳನದ ವರದಿ ಘಾನಾದ ಕಾರ್ಮಿಕ ಆಂದೋಲನದ ಉಚ್ಛ ರಾಜಕೀಯ ಪ್ರಜ್ಞೆಯ ದ್ಯೋತಕ ಎಂದು ಸೌಹಾರ್ದ ಪ್ರತಿನಿಧಿಯಾಗಿ ಈ ಸಮ್ಮೇಳನದಲ್ಲಿ ಭಾಗವಹಿಸಿದ ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಹಾಗೂ ಸಿ. ಪಿ. ಐ. [ಎಂ] ಸಂಸತ್‌ಸದಸ್ಯ ಕಾ। ಸುಕೋಮಲ್‌ಸೇನ್ ಅಭಿಪ್ರಾಯಪಟ್ಟಿದ್ದಾರೆ.

ಸಿರಿಯಾ ವಿರುದ್ಧ ಸಾಮ್ರಾಜ್ಯಶಾಹಿಗಳ ಜಾಲ

ಆರು ತಿಂಗಳ ಕೆಳಗೆ ಲಂಡನ್ ವಿಮಾನ ನಿಲ್ದಾಣದಲ್ಲಿದ್ದ ಇಸ್ರೇಲ್ ವಿಮಾನವನ್ನು ಛಿದ್ರ ಮಾಡುವ ಪ್ರಕರಣದ ನಂತರ ಸಿರಿಯಾ ಸರಕಾರವನ್ನು ಉರುಳಿಸಲು ಹಲವು ತಂತ್ರಗಳನ್ನು ಬಳಸಲಾಗುತ್ತಿದೆ. ಅದಕ್ಕಾಗಿಯೇ ಇಸ್ರೇಲ್‌ನಲ್ಲಿ ಅಮೇರಿಕಾ ತನ್ನ ಶಸ್ತ್ರಗಳನ್ನು ಪೇರಿಸುತ್ತಿದೆ.

ಸಿರಿಯಾ ಸರ್ಕಾರ ವಿಶ್ವದಲ್ಲಿ ಭಯೋತ್ಪಾದಕತೆಯನ್ನುಂಟು ಮಾಡಲು ಶ್ರಮಿಸುತ್ತಿದೆ ಎಂದು ಹೇಳುತ್ತಾ ಅಮೇರಿಕ ಅನೇಕ ಆರ್ಥಿಕ ದಿಗ್ಬಂದನವನ್ನು ಹಾಕಿದೆ. ಬ್ರಿಟನ್ ಸಹ ಮತ್ತಷ್ಟು ಆರ್ಥಿಕ ದಿಗ್ಬಂಧನಗಳನ್ನು ಹಾಕಿದೆ. ಇದು ಸಾಮ್ರಾಜ್ಯಶಾಹಿ ಪಡೆಯ ಮೊದಲ ಹೆಜ್ಜೆ. ಸಿರಿಯಾದಿಂದ ಅಮೇರಿಕಾ ತನ್ನ ರಾಯಭಾರಿಯನ್ನು ವಾಪಸ್ ಕರೆಸಿ ಕೊಂಡಿದೆ. ಅಮೇರಿಕಾದ ಒತ್ತಡದಿಂದಾಗಿ ಪ.ಜರ್ಮನಿಯೂ ಸಹ ಸಿರಿಯಾ ವಿರುದ್ಧ ಪ್ರಚಾರದಲ್ಲಿ ಕೈಗೂಡಿಸಿದೆ. ವೆಸ್ಟ್‌ಬರ್ಲಿನ್‌ನ ಕಮ್ಯಾಂಡೆಂಟ್ ಕಚೇರಿಯಲ್ಲಿರುವ ಅಮೇರಿಕಾ,ಬ್ರಿಟನ್ ಮತ್ತು ಫ್ರೆಂಚ್ ಪಡೆಗಳು ಅಲ್ಲಿಂದ ಸಿರಿಯಾ ಪ್ರಜೆಗಳನ್ನು ಓಡಿಸಲು ಸಂಚುಮಾಡಿವೆ.

ಸಿರಿಯಾ,ಅಂತರಾಷ್ಟ್ರೀಯ ಭಯೋತ್ಪಾದಕತೆಯನ್ನು ತಡೆಯಲು ಶ್ರಮಿಸಬೇಕೆಂದು ಹೇಳುತ್ತಿರುವಾಗಲೆ ಈ ಘಟನೆ ನಡೆಯುತ್ತಿದೆ. ಈ ಮಧ್ಯೆ ಅಮೇರಿಕಾದ ಉಪಕಾರ್ಯದರ್ಶಿ ಇಸ್ರೇಲ್‌ಗೆ ಗುಪ್ತಭೇಟಿನೀಡಿ ಇನ್ನೂ ಹೆಚ್ಚು ಶಸ್ತ್ರ ಸಹಾಯ ನೀಡಲು ಒಪ್ಪಿದೆ. ಇಸ್ರೇಲ್ ಲೆಬನಾನ್‌ನಲ್ಲಿರುವ ಸಿರಿಯಾ ಮಿಲಿಟರಿ ನೆಲೆಯ ಮೇಲೆ ದಾಳಿ ನಡೆಸಿ ಸಿರಿಯಾದ ಮಿಲಿಟರಿ ಶಕ್ತಿಯನ್ನು ಕೊನೆಗಾಣಿಸಲು ಹವಣಿಸುತ್ತಿದೆ.

ಪ.ಏಷ್ಯಾದ ರಾಷ್ಟ್ರಗಳ ಸಮ್ಮೇಳನ ನಡೆಸುವ ಕಾರ್ಯವು ಜನಪ್ರಿಯವಾಗುತ್ತಿರುವ ಸಮಯದಲ್ಲಿಯೇ ಈ ಪ್ರಕರಣ ನಡೆಸುತ್ತಿರುವುದು ಮತ್ತು ವಿಶ್ವಸಂಸ್ಥೆಯ ಎಲ್ಲಾ ರಾಷ್ಟ್ರಗಳು ಈ ಸಮ್ಮೇಳನದಲ್ಲಿ ಭಾಗವಹಿಸುವುದರಿಂದ ಅಮೇರಿಕಾ ಸಾಮ್ರಾಜ್ಯಶಾಹಿಗಳ ವಿರುದ್ಧ ಅಂತರಾಷ್ಟ್ರೀಯ ಸಹಾಯ ಸಹಕಾರಗಳ ಒಪ್ಪಂದ ರೂಪುಗೊಳ್ಳುತ್ತಿರುವುದು ಸಾಮ್ರಾಜ್ಯಶಾಹಿಗಳಿಗೆ ಭಯ ತಂದೊಡ್ಡಿದೆ.

○

ಫ್ರೆಂಚ್ ವಿದ್ಯಾರ್ಥಿಗಳಿಗೆ ಜಯ

ಕಳೆದ ಮೂರು ವಾರಗಳ ವಿದ್ಯಾರ್ಥಿಗಳ ಸಮೂಹ ಹೋರಾಟಕ್ಕೆ ಕೊನೆಗೂ ಜಯ ದೊರೆತಿದೆ. ಬಲಪಂಥೀಯ ಚಿರಾಕ್ ಸರ್ಕಾರ ಜಾರಿಗೆ ತರಲು ಬಯಸಿದ್ದ ನೂತನ ವಿಶ್ವವಿದ್ಯಾಲಯದ ಕಾನೂನುಗಳ ವಿರುದ್ಧ ಫ್ರೆಂಚ್ ವಿದ್ಯಾರ್ಥಿಗಳು ಭಾರೀ ಮತಪ್ರದರ್ಶನ ನಡೆಸಿದ್ದರು. ನವೆಂಬರ್27 ರಂದು 50ಲಕ್ಷ ಜನರ ಮೆರವಣಿಗೆಯಲ್ಲದೆ ಕೇವಲ ಪ್ಯಾರಿಸ್ ಒಂದರಲ್ಲಿಯೇ ಮೂರುಲಕ್ಷ ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು.

ಹೊಸ ವಿಶ್ವವಿದ್ಯಾಲಯದ ಕಾನೂನುಗಳು ಉಳ್ಳವರ ಪರವಾಗಿದ್ದು ಪ್ರತಿಗಾಮಿ ಅಂಶಗಳಿಂದ ಕೂಡಿತ್ತಲ್ಲದೆ ಉನ್ನತ ಕೋರ್ಸ್‌ಗಳ ಸಂಪೂರ್ಣ ಖಾಸಗೀಕರಣ ನಡೆಸಲು ಅನುಮತಿ ನೀಡಿತ್ತು. ಈಗ ಫ್ರೆಂಚ್‌ನಲ್ಲಿ ಚಾಲ್ತಿಯಲ್ಲಿರುವ ಉಚಿತ ಭೋಧನೆಗೆ ಮತ್ತು ಕೋರ್ಸ್‌ಗಳಿಗೆ ಎಲ್ಲರೂ ಸೇರದಂತೆ ಈ ಕಾನೂನು ತಡೆ ಒಡ್ಡಿತ್ತು. ಪೋಲೀಸ್ ಹೊಡೆತಕ್ಕೆ ಸಿಕ್ಕಿ ಮರಣ ಹೊಂದಿದ ವಿದ್ಯಾರ್ಥಿಗೆ ಸಂತಾಪ ಸೂಚಿಸಲು ಹತ್ತು ಬೃಹತ್ ಮೆರವಣಿಗೆಗಳು ನಡೆದವು. ಎಡ ಪಕ್ಷ ಹಾಗೂ ಫ್ರೆಂಚ್ ಯೂನಿಯನ್‌ಗಳ ನೇತೃತ್ವದಲ್ಲಿ ನಡೆದ ಈ ಹೋರಾಟದ ಬಿರುಸಿಗೆ ಚಿರಾಕ್ ಸರ್ಕಾರ ಮಣಿದು ತನ್ನ ಕರಾಳ ಕಾಯಿದೆಗಳನ್ನು ವಾಪಸ್ ತೆಗೆದುಕೊಂಡಿತು.

ಇರಾನ್ ಹಗರಣ

ಇರಾನ್‌ಗೆ ಅಮೇರಿಕಾದಿಂದ ಶಸ್ತ್ರ ಮಾರಾಟ ಮಾಡುವ ವಿಷಯ ಅಧ್ಯಕ್ಷ ರೊನಾಲ್ಡ್ ರೇಗನ್ ಅವರಿಗೆ ಗೊತ್ತಿದ್ದುದರಿಂದಲೇ ಅನುಮತಿ ನೀಡಿದರು ಎಂದು ಗೂಢಚರ್ಯೆ ಕುರಿತ ಅಮೇರಿಕ ಸೆನೆಟ್ ಆಯ್ಕೆ ಸಮಿತಿಯ ವರದಿ ತಿಳಿಸಿದೆ.

ಆದರೆ ಈ ಶಸ್ತ್ರ ಮಾರಾಟದ ಬಗ್ಗೆ ತನಗೇನೂ ಗೊತ್ತಿಲ್ಲ ಎಂದು ರೇಗನ್ ಹೇಳಿದ್ದಾರೆ. ಈ ವರದಿಯ ಪ್ರಕಾರ ಸಿ. ಐ. ಎ. ಕೂಡ ಈ ರಹಸ್ಯ ಶಸ್ತ್ರ ಮಾರಾಟದಲ್ಲಿ ಭಾಗಿಯಾಗಿದೆ. ಶಸ್ತ್ರ ಮಾರಾಟದ ಹಣವನ್ನು ನಿಕರಾಗುವಾದ ಬಂಡುಕೋರರಿಗೆ ಒದಗಿಸುವ ಕಾರ್ಯದಲ್ಲೂ ಸಿ. ಐ. ಎ. ಶಾಮೀಲಾಗಿತ್ತೆಂದು ಹೇಳಲಾಗಿದೆ.

ನಂತರ ರೇಗನ್‌ರವರು ಕಾಂಗ್ರೆಸ್‌ನ ಉಭಯ ಸದನದಲ್ಲಿ ಭಾಷಣ ಮಾಡುತ್ತಾ ಇರಾನ್‌ಗೆ ಶಸ್ತ್ರ ನೀಡಿದ್ದನ್ನು ಒಪ್ಪಿಕೊಂಡಿದ್ದಾರಾದರೂ ಇದರಲ್ಲೇನೂ ತಪ್ಪಿಲ್ಲ ಎಂದು ಹೇಳಿ ಪುನಃ ತಮ್ಮ ಭಂಡತನವನ್ನು ಪ್ರದರ್ಶಿಸಿದ್ದಾರೆ. ನಮ್ಮ ಮಿತ್ರ ರಾಷ್ಟ್ರಗಳು ಕಷ್ಟದಲ್ಲಿದ್ದಾಗ, ನಮ್ಮ ಪ್ರಜೆಗಳು ತೊಂದರೆಗೊಳಗಾದಾಗ ಅವರಿಗೆ ಸಹಾಯ ಮಾಡುವುದರಲ್ಲಿ ತಪ್ಪೇನೂ ಇಲ್ಲ ಎಂದಿರುವ ರೇಗನ್ ನಿಕರಾಗುವಾದಲ್ಲಿ ಅಧಿಕಾರವನ್ನು ಉಳಿಸಲು ಪ್ರಾಕ್ಸಿ ಯುದ್ಧ ನಡೆಸುತ್ತಿರುವುದನ್ನು ಮತ್ತೊಮ್ಮೆ ಅಲ್ಲಗೆಳೆದಿದ್ದಾರೆ.

ಗೂರ್ಖಾ ಚಳುವಳಿ ಸ್ಥಗಿತತೆ ಸ್ವಾಗತಾರ್ಹ -ಸುರ್ಜಿತ್

ಘೂರ್ಕಾ ರಾಷ್ಟ್ರೀಯ ವಿಮೋಚನಾರಂಗ[GNLF]ಎರಡು ತಿಂಗಳ ಕಾಲ ತನ್ನ ಚಳುವಳಿಯನ್ನು ಸ್ಥಗಿತಗೊಳಿಸುವೆನೆಂದು, ತನ್ನ ಬೇಡಿಕೆಗಳ ಬಗ್ಗೆ ಮಾತುಕತೆಯಾಡುವಂತಹ ವಾತಾವರಣವನ್ನು ನಿರ್ಮಿಸಲು ಪೂರ್ಣವಾಗಿ ಅಹಿಂಸೆಯನ್ನು ಪಾಲಿಸುತ್ತೇನೆಂದು ಹೇಳಿದುದು ಸ್ವಾಗತಾರ್ಹ ಬೆಳವಣಿಗೆ ಎಂದು ಪಾಲಿಟ್‌ಬ್ಯುರೋ ಸದಸ್ಯ ಕಾಂ. ಹರ್ ಕಿಷನ್‌ಸಿಂಗ್ ಸುರ್ಜಿತ್ ಹೇಳಿದ್ದಾರೆ. ಸುಭಾಷ್ ಘೀಸಿಂಗ್ ಕೇಂದ್ರ ಗೃಹಮಂತ್ರಿಯೊಂದಿಗೆ ನಡೆಸಿದ ಮಾತುಕತೆಗಳು, ರಾಜೀವ್‌ಗಾಂಧಿ ಹಾಗೂ ಜ್ಯೋತಿಬಸುರವರು ಘೂರ್ಕಾಲ್ಯಾಂಡ್ ಎಂಬ ಪ್ರತ್ಯೇಕ ರಾಜ್ಯ ನಿರ್ಮಾಣದ ಪ್ರಶ್ನೆಯೇ ಇಲ್ಲ, ಮತ್ತು ಹಿಂಸೆಯನ್ನು ತ್ಯಜಿಸಬೇಕು ಎಂದು ಪರಸ್ಪರವಾಗಿ ಒಪ್ಪಿದುದರ ಫಲ.

ಘೂರ್ಕಾಗಳ ಪೌರತ್ವದ ಹಕ್ಕಿನ ಪ್ರಶ್ನೆ ಕೇಂದ್ರ ಸರ್ಕಾರದ ಜೊತೆ ಮಾತ್ರ ಚರ್ಚಿಸಬೇಕಾಗಿದ್ದ ವಿಷಯ. ಆ ಬಗ್ಗೆ ಜಿ. ಎನ್. ಎಲ್. ಎಫ್. ನಾಯಕ ತನ್ನ ಅಭಿಪ್ರಾಯಗಳನ್ನು ಗೃಹ ಮಂತ್ರಿ ಶಾಖೆಯ ಮುಂದಿರಿಸಿದ್ದಾನೆ. ನೇಪಾಳೀ ಮೂಲದ ಭಾರತೀಯ ಪ್ರಜೆಗಳು ಹಾಗೂ ಭಾರತದಲ್ಲಿ ವಾಸವಾಗಿರುವ ನೇಪಾಳಿ ಪ್ರಜೆಗಳು ಇವರ ನಡುವೆ ಸ್ಪಷ್ಟ ವ್ಯತ್ಯಾಸ ಮಾಡಬೇಕು. ಎಂಬುದೇನೋ ಸರಿ. ಆದರೆ ಡಾರ್ಜಿಲಿಂಗ್ ಹೊರಗೆ ಜೀವಿಸುತ್ತಿರುವ ಘೂರ್ಕಾಗಳನ್ನು ಇದರಲ್ಲಿ ಗಣನೆಗೆ ತೆಗೆದುಕೊಳ್ಳಬೇಕು ಎಂಬುದು ಸಿ. ಪಿ. ಐ, [ಎಂ] ನ ಅಭಿಪ್ರಾಯ.

ಜಿ. ಎನ್. ಎಲ್. ಎಫ್. ನಾಯಕನನ್ನು ದೆಹಲಿಗೆ ಕರೆಸಿದ್ದು ಪೌರತ್ವದ ಪ್ರಶ್ನೆಯೊಂದರ ಬಗ್ಗೆ ಚರ್ಚಿಸಲು ಎಂಬುದು ಸ್ಪಷ್ಟವಾಗಿದ್ದರೂ, ಅವರು ಘೂರ್ಕಾಲ್ಯಾಂಡ್ ಬಗ್ಗೆ ತನ್ನ ಅಭಿಪ್ರಾಯಗಳನ್ನು ಮಂಡಿಸಲು-ಅದರಲ್ಲಿಯೂ ಪತ್ರಿಕೆಗಳ ಮೂಲಕ – ಈ ಅವಕಾಶವನ್ನು ಬಳಸಿಕೊಂಡಿದ್ದಾರೆ. ಇದು ಒಂದು ತಂತ್ರ ಮಾತ್ರವೇನೋ ಅಥವಾ ವಿಮೋಚನಾ ರಂಗದಲ್ಲಿನ ತೀವ್ರಗಾಮಿ ಗುಂಪುಗಳನ್ನು ತೃಪ್ತಿಪಡಿಸಲೆಂದೋ ಎಂಬುದನ್ನು ಕಾದು ನೋಡಬೇಕಾಗಿದೆ ಎಂದು ಕಾಂ|| ಸುರ‌ಜಿತ್ ಹೇಳಿದ್ದಾರೆ.

ಜಿಲ್ಲಾ ಪರಿಷತ್, ಮಂಡಲ್ ಪಂಚಾಯತ್ ಸಮಾವೇಶ

(1ನೇ ಪುಟದಿಂದ)
ಕೃತ ಚಳುವಳಿಯಲ್ಲಿ ನುರಿತವರನ್ನು ಆರಿಸಿ, ಅವರ ಕೈಗೆ ಅಧಿಕಾರ ಹಸ್ತಾಂತರಿಸಿದೆಯಲ್ಲದೆ, ಗ್ರಾಮಾಂತರ ಪ್ರದೇಶದ ಪಟ್ಟಭದ್ರ ಹಿತಾಸಕ್ತಿಗಳನ್ನೂ ಅವರ ಕೈಗೊಂಬೆಗಳಾಗಿರುವವರನ್ನೂ ಆರಿಸಿಲ್ಲ. ನಮ್ಮ ರಾಜ್ಯದಲ್ಲಿ ಆರಿಸಿ ಬಂದವರು ತಮ್ಮ ಜವಾಬ್ದಾರಿಯನ್ನರಿತು ಹೊಸ ಪ್ರಯೋಗದ ಯಶಸ್ಸಿಗೆ ದುಡಿಯುತ್ತಾರೆಂದು ಹಾರೈಸಬೇಕಾಗಿದೆ.

ಭಾರತದ ಮಾನವ ಸಂಪನ್ಮೂಲ ಮಂತ್ರಿ ಡಾ|| ನರಸಿಂಹರಾವ್ ಅವರು ಸಮ್ಮೇಳನವನ್ನು ಉದ್ಘಾಟಿಸುತ್ತಾ ಕರ್ನಾಟಕದ ಪಂಚಾಯತ್ ರಾಜ್ಯ ವ್ಯವಸ್ಥೆ ಇತರೆ ರಾಜ್ಯಗಳಿಗಿಂತ ಅತ್ಯುತ್ತಮವಾಗಿದೆಂದು ಹೊಗಳಿದ್ದಾರೆ. "ಪಂಚಾಯತ್ ರಾಜ್ಯ ಆಂದೋಳನದ ಕಾರ್ಯಕರ್ತರು ರಾಜಕೀಯ ಭೇದವಿದ್ದೂ ಜನ ತಾಂತ್ರಿಕ ಮಾರ್ಗದಲ್ಲಿ ಅಧಿಕಾರ ಕೆಳ ಹಂತದಲ್ಲಿ ಹಂಚಿಕೆಯಾಗಲಿ ಎಂಬ ಧ್ಯೇಯ ನಿಷ್ಟೆ ಹೊಂದಿರುವ ಮೂಲಕ ಒಂದೇ ಪಕ್ಷ ಅಂದರೆ ಪಂಚಾಯತ್ ರಾಜ್ಯ ಪಕ್ಷಕ್ಕೆ ಸೇರಿದವರು. ಈ ಆಂದೋಳನದಲ್ಲಿ ನಮಗೇನೂ ರಾಜಕೀಯ ಭಿನ್ನತೆ ಕಾಣುವುದಿಲ್ಲ" ಎಂದು ಹೇಳಿದ್ದಾರೆ. ಈ ಮಹಾಶಯರಿಗೆ ಅವರ ಪಕ್ಷದವರೇ ಅದೇ ಸ್ಥಳದಲ್ಲಿ ಉತ್ತರ ಕೊಟ್ಟಿದ್ದಾರೆ.

"ಇಂದಿನ ಮೇಳಕ್ಕೆ ಜನತಾ ಪಕ್ಷದ ಸ್ವರೂಪ ಕೊಟ್ಟಿರುವುದ ತಪ್ಪು. ಈ ಮೇಳವನ್ನು ನಾವು ಬಹಿಷ್ಕರಿಸಬೇಕಾಗಿತ್ತು. ನರಸಿಂಹರಾಯರೂ ಈ ಸಮ್ಮೇಳನಕ್ಕೆ ಬರಬೇಡಿರೆಂದು ಹೇಳಬೇಕಾಗಿತ್ತು" ಎಂದು ಬಂಗಾರಪ್ಪನವರು ತಮ್ಮ ಪಕ್ಷದಿಂದ ಚುನಾಯಿಸಲ್ಪಟ್ಟ ಸದಸ್ಯರನ್ನುದ್ದೇಶಿಸಿ ಅಲ್ಲೇ ಹೇಳಿದರು.

ನಿರ್ದಿಷ್ಟ ರಾಜಕೀಯ, ಆರ್ಥಿಕ-ಸಾಮಾಜಿಕ ನಿರೂಪಣೆಯಿಲ್ಲದೆ ಪಂಚಾಯತ್ ರಾಜ್ಯ ವ್ಯವಸ್ಥೆ ಯಾವ ಗುರಿಯನ್ನು ಸಾಧಿಸಬಹುದು ? ಬರೀ ಸದಸ್ಯತ್ವ ಪಡೆಯುವುದರ ಸಲುವಾಗಿಯೇ ಹಣ-ಹೆಂಡ-ಜಾತಿ, ಗೂಂಡಾಗಿರಿಯ ಪ್ರಭಾವದಿಂದ ಆರಿಸಿ ಬಂದ ಸದಸ್ಯರಿಂದ ಪಂಚಾಯತ್ ರಾಜ್ಯದ ಮೂಲ ಗುರಿಯನ್ನು ಮುಟ್ಟಬಹುದೇ ಅಥವಾ ಅದರ ಸಲುವಾಗಿ ನಿಷ್ಠೆಯಿಂದ ಪ್ರಯತ್ನಿಸುತ್ತೇನೆಂಬ ಪ್ರಜ್ಞೆ ಉಂಟಾಗಬಹುದೇ ? ಭಾರತದ ಮಾನವ ಸಂಪನ್ಮೂಲ ಮಂತ್ರಿಯವರಿಗೆ, ಈಗ ಆರಿಸಿ ಬಂದಿರುವ ಹೆಚ್ಚಿನ ಜಿಲ್ಲಾ ಪರಿಷತ್ ಮಂಡಲ ಪಂಚಾಯತ್ ಸದಸ್ಯರ ''ಮಾನವ ಸಂಪನ್ಮೂಲ" ವೆಂದರೇನೆಂಬ ಪರಿಗಣನೆಯೇ ಇಲ್ಲ. "ಮಾನವ ಸಂಪನ್ಮೂಲ" ವೆಂದರೆ ಹೆಂಡ ಸರಾಯಿ – ಹಣ ಮಾತ್ರವೇ ಎಂಬ ಅಂಶ ತಿಳಿದಂತೆ ಕಂಡುಬರುವುದಿಲ್ಲ. ಪಂಚಾಯತ್ ರಾಜ್ಯ ಪಕ್ಷ ನಿಜವಾಗಿಯೂ ಸಾರ್ಥಕವೇ? ನರಸಿಂಹರಾಯರ ಈ ಸಿದ್ಧಾಂತವನ್ನು ನಾವು ಒಪ್ಪುವುದಿಲ್ಲ. ಅವರ ಭಾಷಣ ಕೇಳುತ್ತಿದ್ದ ಗ್ರಾಮಾಂತರ ಪ್ರದೇಶದ ಸಾವಿರಾರು ಸದಸ್ಯರಿಗೂ ಅವರು ಹೇಳಿದ್ದು ಎಷ್ಟು ಅರ್ಥವಾಗಿರಬೇಕೆಂಬುದು ಸಂಶಯಾತ್ಮಕವೇ? ಕೇಂದ್ರ ಹಾಗೂ ಕರ್ನಾಟಕದಲ್ಲಿ ಆಳುವ ಪಕ್ಷದ "ಕೆಳ ಹಂತದಲ್ಲಿ ಅಧಿಕಾರದ ಹಂಚಿಕೆಯು" ಘೋಷಣೆ ಎಷ್ಟರ ಮಟ್ಟಿಗೆ ಫಲಪ್ರದವಾದೀತೆಂಬುದನ್ನು ಸರ್ಕಾರಗಳು ಅನುಸರಿಸುವ ನಿರ್ದಿಷ್ಟ ನಿಲುವುಗಳಿಂದಲೇ ಕಾಣಬಹುದಾಗಿದೆ.

ಕಾರ್ಯಕ್ರಮದಲ್ಲಿ ರಾಜಕೀಯಕ್ಕೆ ಸಂಬಂಧಿಸದ ಭಾಗವನ್ನು ನಿಮಗೆ ವಹಿಸಲಾಗಿದೆ. ಇದನ್ನು ನೀವು ಹೇಗೆ ಅನುಷ್ಠಾನದಲ್ಲಿ ತರುತ್ತೀರಿ ಎಂಬುದು ನಮ್ಮ ಜನತಾಂತ್ರಿಕ ಸಮರ್ಪಕತೆಯನ್ನು ತೋರಿಸಿ ಕೊಡುತ್ತದೆ" ಎಂದು ನರಸಿಂಹರಾಯರು ಹೇಳಿದ್ದಾರೆ. ರಾಜಕೀಯವನ್ನು ಬಿಟ್ಟುಕೊಟ್ಟ ಜನತಾಂತ್ರಿಕ ಸಮರ್ಪಕತೆ ಯಾವುದೆಂಬುದನ್ನು ಮಂತ್ರಿವರ್ಯರು ವಿವರಿಸಿದ್ದರೆ ಸರಿ ಹೋಗುತ್ತಿತ್ತು. ಜನರನ್ನು ಮೂಢ ನಂಬಿಕೆಯಲ್ಲಿ ಮುಳುಗಿಸುತ್ತಾ ತಮ್ಮ ಅಧಿಕಾರವನ್ನು ಭದ್ರಗೊಳಿಸುವ ಬಂಡವಾಳಗಾರ ಭೂಮಾಲಕ ಪಕ್ಷಗಳ ಮೂಲ ಸಿದ್ಧಾಂತವೇ ಅದಾಗಿದೆ. ಪಶ್ಚಿಮ ಬಂಗಾಲ-ತ್ರಿಪುರಗಳಲ್ಲಿ ಜನತೆ ಆ ಸಿದ್ಧಾಂತವನ್ನು ನಿರಾಕರಿಸಿದೆ. ಅಲ್ಲಿ ಆರಿಸಿ ಬಂದ ಬಹುಸಂಖ್ಯೆಯ ಜಿಲ್ಲಾ ಪರಿಷತ್ ಸದಸ್ಯರೂ ಅದನ್ನು ಅಲ್ಲಗಳೆದಿದ್ದಾರೆ. ಕರ್ನಾಟಕದಲ್ಲಿಯೂ ಮುಂದಿನ ವರ್ಷಗಳಲ್ಲಿ ಅಂಥ ಸಿದ್ಧಾಂತವನ್ನು ಬಿಟ್ಟುಕೊಡುತ್ತಾರೆಂಬ ಆಶಯ ಹೊಂದಿದರೆ ತಪ್ಪೇನಿಲ್ಲ.

ಎಸ್. ಕೆ. ಡೇ ಅವರು ದೆಹಲಿಯಲ್ಲಿ ಹನ್ನೆರಡು ಶತಮಾನಗಳಿಂದಲೂ ಇತಿಹಾಸಕ್ಕೆ ಕಾರಣರಾದವರೆಲ್ಲರ ಗೋರಿ ಇದೆ, ಈಗಲೂ ಆ ಪಿಶಾಚಿಗಳ ನೆರಳು ಆಡಳಿತದ ಮೇಲೆ ಇದೆ, ದೆಹಲಿ ಮನುಷ್ಯರ ಹಿತಚಿಂತನೆಯ ಕೇಂದ್ರವಾಗಿ ಇನ್ನೂ ಮಾರ್ಪಟ್ಟಿಲ್ಲವೆಂದು ದೂರಿ ತಮ್ಮ ಕನಸನ್ನೇ ನನಸುಗೊಳಿಸಲು ದುಡಿಯಬೇಕೆಂದು ಕರೆ ನೀಡಿದರು. ಡಿಲ್ಲಿಯ ಪಿಶಾಚಿಗಳ, ದೇಶಾದ್ಯಂತ ಹಬ್ಬಿರುವ ಆ ಪಿಶಾಚಿಗಳ ನೆರಳಿನಿಂದ ದುಡಿಯುವ ಜನತೆಯನ್ನು ವಿಮೋಚನೆಗೊಳಿಸಿ ಸಮತಾವಾದಿ ಸಿದ್ಧಾಂತದ ತಳಹದಿಯಲ್ಲಿ ಎಡ ಮತ್ತು ಪ್ರಜಾಪ್ರಭುತ್ವದ ಕಾರ್ಯಕ್ರಮದಂತೆ ರಾಜಕೀಯ ಕಾರ್ಯಕ್ರಮವನ್ನು ಅನುಷ್ಠಾನದಲ್ಲಿ ತರುವುದೇ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಕ್ಷದ, ಸಿ.ಪಿ.ಐ.(ಎಂ) ಪಕ್ಷದ ಪರವಾಗಿ ಆರಿಸಿ ಬಂದ ಜಿಲ್ಲಾ ಪರಿಷತ್. ಮಂಡಲ ಪಂಚಾಯತ್ ಸದಸ್ಯರ ಮೂಲ ಉದ್ದೇಶ. ●

ದ. ಕ. ಜಿಲ್ಲೆ – ಪಕ್ಷಕ್ಕೆ 70 ಪಂಚಾಯತ್ ಸ್ಥಾನಗಳು

ಇತ್ತೀಚಿಗೆ ನಡೆದ ಮಂಡಲ ಪಂಚಾಯತ್ ಚುನಾವಣೆಗಳಲ್ಲಿ ಸಿ.ಪಿ.ಐ. (ಎಂ) ಸ್ವತಂತ್ರ ಚಿಹ್ನೆಯಲ್ಲಿ ತನ್ನ ಅಭ್ಯರ್ಥಿಗಳನ್ನು ನಿಲ್ಲಿಸಿದ್ದು ದ.ಕನ್ನಡ ಜಿಲ್ಲೆಯಲ್ಲಿ ಒಟ್ಟು 70 ಸ್ಥಾನಗಳಲ್ಲಿ ಜಯಗಳಿಸಿದೆ. ಮಂಗಳೂರು ತಾಲ್ಲೂಕಿನ ಉಳ್ಳಾಲ ಮಂಡಲ ಪಂಚಾಯತ್‌ನಲ್ಲಿ ಪಕ್ಷವು 13 ಸ್ಥಾನ ಪಡೆದು ದ್ವಿತೀಯ ಪಕ್ಷವಾಗಿಯೂ, ಕುಂದಾಪುರದ ಕೋಟೇಶ್ವರದಲ್ಲಿ 10 ಸ್ಥಾನ ಪಡೆದು ಪ್ರಥಮ ಪಕ್ಷವಾಗಿಯೂ ಆರಿಸಿ ಬಂದಿದೆ. ಅಲ್ಲದೆ ಇನ್ನೂ ಅನೇಕ ಪಂಚಾಯತುಗಳಲ್ಲಿ ನಿರ್ಣಾಯಕ ಶಕ್ತಿಯಾಗಿ ಪಕ್ಷದ ಉಮೇದುವಾರರು ಚುನಾಯಿತರಾಗಿದ್ದಾರೆ. ಈ ಚುನಾವಣೆಯಲ್ಲಿ ಪಕ್ಷಕ್ಕೆ ಬೆಂಬಲ ನೀಡಿ ಮತ ನೀಡಿದ ಮತದಾರರಿಗೂ, ಪಕ್ಷದ ಗೆಲುವಿಗೆ ಶ್ರಮಿಸಿದ ಕಾರ್ಯಕರ್ತರಿಗೂ ಮತ್ತು ಹಿತೈಷಿಗಳಿಗೂ ಪಕ್ಷದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಪರವಾಗಿ ಕಾರ್ಯದರ್ಶಿ ಕಾ. ಕೆ. ಆರ್. ಶ್ರೀಯಾನ್ ತಮ್ಮ ಅಭಿನಂದನೆಯನ್ನು ಸಲ್ಲಿಸಿದ್ದಾರೆ.

ಈ ವಾರ....

ಬರ್ನಾಲಾ ಸರ್ಕಾರಕ್ಕೆ ಬೆಂಬಲ ಮುಂದುವರೆಸುವುದನ್ನು ತನ್ನ ಹೈಕಮಾಂಡ್ ಪುನರ್ವಿಮರ್ಶಿಸಬೇಕೆನ್ನುವ ಕಾಂಗ್ರೆಸ್ (ಐ) ನ ರಾಜ್ಯ ಘಟಕ ಹಾಗೂ ಬರ್ನಾಲಾ ಸರ್ಕಾರವನ್ನು ರದ್ದುಮಾಡಬೇಕೆಂದು ಕೇಂದ್ರವನ್ನು ಒತ್ತಾಯಿಸುವ ಬಿ. ಜೆ. ಪಿ. ತಮ್ಮ ತಕ್ಷಣದ ಪ್ರಯೋಜನದ ನಿಲುವನ್ನು ಬಿಟ್ಟು ಬರ್ನಾಲಾ ಸರ್ಕಾರದ ಕೈಗಳನ್ನು ಬಲಪಡಿಸಬೇಕು.

–ಡೆಕ್ಕನ್ ಹೆರಾಲ್ಡ್, ಜ. 30

ಪರೋಕ್ಷ ತೆರಿಗೆಗಳು 1950–51 ರಲ್ಲಿ 396 ಕೋಟಿ ರೂ. ಗಳಿದ್ದದ್ದು 1986–87 ರಲ್ಲಿ 41 ಸಾವಿರ ಕೋಟಿ ರೂ. ಗಳಿಗೇರಿದೆ. ಅಂದರೆ ನೂರಕ್ಕೂ ಹೆಚ್ಚು ಪಟ್ಟು ಏರಿದೆ. ಆದರೆ ಪ್ರತ್ಯಕ್ಷ ತೆರಿಗೆಗಳು 1950-51 ರಲ್ಲಿ 231 ರೂ. ಗಳಿಂದ 1986-87 ರಲ್ಲಿ 6437 ಕೋಟಿ ರೂ. ಗಳಿಗೆ ಅಂದರೆ ಸುಮಾರು 28 ಪಟ್ಟು ಏರಿದೆ.

–ಪಿ. ಟಿ. ಐ. ವಾರ್ತೆ, ಫೆ. 1

ಅಮೇರಿಕಾಕ್ಕೆ ವಾಯುನೆಲೆ, ನೌಕಾನೆಲೆ ನೀಡಿರುವ ಪಾಕಿಸ್ತಾನ ಈಗ ಅಮೇರಿಕಾದ ಕ್ಷಿಪ್ರ ರವಾನೆ ಪಡೆಯೊಂದನ್ನು ತನ್ನ ಪ್ರದೇಶದಲ್ಲಿ ಇರಿಸಲು ಅವಕಾಶ ಮಾಡಿಕೊಡುವ ರಹಸ್ಯ ಒಪ್ಪಂದವೊಂದನ್ನು ಮಾಡಿಕೊಂಡಿದ್ದು ಮಾರ್ಚ್ ಪ್ರಾರಂಭದಲ್ಲಿ ಇದು ಜಾರಿಗೆ ಬರಲಿದೆಯೆಂದು ಬೈರೂತ್‌ನ ಸಾಪ್ತಾಹಿಕವೊಂದು ಹೇಳಿದೆ. ಇದರಿಂದ ಪರ್ಷಿಯಾ ಕೊಲ್ಲಿಯಿಂದ ದಕ್ಷಿಣ ಏಷ್ಯಾದವರೆಗಿನ ವಿಶಾಲ ಪ್ರದೇಶದ ಮೇಲೆ ಸೈನಿಕ ಒತ್ತಡ ಹೇರುವುದಕ್ಕೆ ಅಮೆರಿಕಾಕ್ಕೆ ಅವಕಾಶ ದೊರೆತಂತಾಗಿದೆ.

–ಯು. ಎನ್. ಐ. ವಾರ್ತೆ, ಫೆ. 3

ಸ್ಥಳೀಯ ಅಭ್ಯರ್ಥಿಗಳಾಗಲಿ, ಗುತ್ತಿಗೆ ಶಿಕ್ಷಕರಾಗಲಿ, ಪರೀಕ್ಷೆ ಪತ್ರಿಕೆಗಳ ಮೌಲ್ಯಮಾಪಕರಾಗಲಿ, ದಿನಕೂಲಿಗಳಾಗಲಿ ಅವರ ಸಮಸ್ಯೆಗಳನ್ನು ಗುರುತಿಸಿ ಅವುಗಳ ಸಕಾಲಿಕ ಮತ್ತು ಶಾಶ್ವತ ಪರಿಹಾರಕ್ಕೆ ಪ್ರಯತ್ನಿಸುವ ಸಂಕಲ್ಪವನ್ನು ಸರ್ಕಾರವೇಕೆ ಪ್ರದರ್ಶಿಸಬಾರದು ?

–ಪ್ರಜಾವಾಣಿ, ಫೆ: 4

ಸಾರ್ವಜನಿಕ ವಲಯವನ್ನು ಖಾಸಗೀಕರಣಗೊಳಿಸಲಾಗುತ್ತಿದೆ ಎಂಬುದು ಕೇವಲ "ಸೋಮಾರಿಗಳ ಮಾತು" ಎಂದು ತಳ್ಳಿಹಾಕುವ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಮಂತ್ರಿ ಕೆ. ಕೆ. ತಿವಾರಿಯವರೇ ನೆರವು ನೀಡುವ ದೇಶಗಳಿಗೆ ತಮ್ಮ ನೆರವಿಗೆ ಯಂತ್ರಗಳನ್ನು ಎಲ್ಲಿಂದ ಪಡೆಯಬೇಕು ಎಂದು ವಿಧಿಸುವಲ್ಲಿ "ಮಹತ್ವದ ಪಾತ್ರ" ವಿರಬೇಕು ಎಂದು ನಿರ್ಲಜ್ಜವಾಗಿ ಘೋಷಿಸುತ್ತಿರುವುದು ಆತಂಕಕಾರಿ.

'ಡೆಕ್ಕನ್ ಹೆರಾಲ್ಡ್'ನಲ್ಲಿ ಒಂದು ಲೇಖನ, ಫೆ.4

ತನ್ನ ಚಳುವಳಿಗೆ ಆರ್ಥಿಕ ಹಿಂದುಳಿಕೆ ಕಾರಣ ಎಂಬುದನ್ನು ತಿರಸ್ಕರಿಸುವ ಘೀಸಿಂಗ್ ಘೂರ್ಖಾ ಜನರ ಅನನ್ಯತೆಯನ್ನು ಬಲಪಡಿಸುವುದಕ್ಕಾಗಿ ಪ್ರತ್ಯೇಕ ರಾಜ್ಯ ಬೇಕೆಂದು ಹೇಳಿದ್ದಾರೆ. ಆದರೂ ಕೇಂದ್ರ ಸರ್ಕಾರ ಈ ಚಳುವಳಿಗೆ ರಾಜ್ಯ ಸರ್ಕಾರದ ಧೋರಣೆಗಳಿಂದಾಗಿ ಉಂಟಾಗಿರುವ ಡಾರ್ಜಿಲಿಂಗ್ ಪ್ರದೇಶದ ಆರ್ಥಿಕ ನಿರ್ಲಕ್ಷ್ಯ ಹಾಗೂ ಹಿಂದುಳಿಕೆಯೇ ಕಾರಣ ಎಂದು ಇನ್ನೂ ಹೇಳುತ್ತಿದೆ.

–ಡೆಕ್ಕನ್ ಹೆರಾಲ್ಡ್, ಫೆ.5

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Sultanpet B-53 Phone : 75331
Editorial and Managerial Office : L-56, K. V. Temple Street,
Editor P. Ramachandra Rao
Managing Editor : N.K. Upadhyaya